بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 06

ಸಂಚಿಕೆ: 13

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

27 ಮಾರ್ಚ್ 2025, 27 ಅಮಾನ್ 1404 ಹಿಜರಿ ಶಮ್‌ಸಿ,
26 ರಮಝ಼ಾನ್ 1446 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْا كُتِبَ عَلَيْكُمُ الصِّيَامُ كَمَا كُتِبَ عَلَى الَّذِيْنَ مِنْ قَبْلِكُمْ لَعَلَّكُمْ تَتَّقُوْنَ۝

(ಅಲ್ ಬಖರ: 184)

ಅಂದರೆ: ಎಲ್ಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ವ್ರತಾನುಷ್ಠಾನವನ್ನು ವಿಧಿಸಲಾಗಿದೆ – ನೀವು ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ರಮಝ಼ಾನ್‌ನ ಮಹತ್ವ

**(1898)** ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ನುಡಿಯುತ್ತಾರೆ: ರಮಝ಼ಾನ್ ಬಂದಾಗ ಸ್ವರ್ಗದ ದ್ವಾರಗಳು ತೆರೆಯಲ್ಪಡುತ್ತವೆ.

**(1899)** ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ನುಡಿಯುತ್ತಾರೆ: ರಮಝ಼ಾನ್‌ನ ಮಾಸ ಬಂದಾಗ, ಸ್ವರ್ಗದ ದ್ವಾರಗಳು ತೆರೆಯಲ್ಪಡುತ್ತವೆ ಮತ್ತು ನರಕದ ಬಾಗಿಲುಗಳು ಮುಚ್ಚಲ್ಪಡುತ್ತವೆ ಮತ್ತು ಶೈತಾನರನ್ನು ಸರಪಳಿಯಲ್ಲಿ ಬಂಧಿಸಲಾಗುತ್ತದೆ.

**(1901)** ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ನುಡಿಯುತ್ತಾರೆ: ಯಾವ ವ್ಯಕ್ತಿ ಲೈಲತುಲ್ ಖದರ್‌ನಲ್ಲಿ ಪ್ರತಿಫಲದ ಉದ್ದೇಶದಿಂದ ಆರಾಧನೆಗೆ ನಿಲ್ಲುತ್ತಾನೋ, ಅವನ ಹಿಂದಿನ ಹಾಗೂ ಮುಂದಿನ ಪಾಪಗಳನ್ನು ಕ್ಷಮಿಸಲಾಗುವುದು ಮತ್ತು ಯಾರು ರಮಝ಼ಾನಿನ ಉಪವಾಸಗಳನ್ನು ಪ್ರತಿಫಲದ ಉದ್ದೇಶದಿಂದ ಇರಿಸುತ್ತಾನೋ ಅವನ ಎಲ್ಲಾ ಪಾಪಗಳನ್ನು ಕ್ಷಮಿಸಲಾಗುವುದು.

### ಉಪವಾಸಕ್ಕೆ ಸುಳ್ಳು ಹಾನಿಕಾರಕ ವಿಷವಾಗಿದೆ

(1903) ಹಝ್ರತ್ ಅಬುಹುರೈರಾ(ರ) ಅವರು ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಹೇಳಿದರು: ಒಬ್ಬ ವ್ಯಕ್ತಿ ಸುಳ್ಳು ಹೇಳುವುದನ್ನು ಮತ್ತು ಸುಳ್ಳನ್ನು ಅಭ್ಯಾಸ ಮಾಡುವುದನ್ನು ನಿಲ್ಲಿಸದಿದ್ದರೆ, ಅಂತಹ ವ್ಯಕ್ತಿಯು ಅಲ್ಲಾಹನಿಗೋಸ್ಕರ ತಿನ್ನುವುದು ಮತ್ತು ಕುಡಿಯುವುದನ್ನು ನಿಲ್ಲಿಸುವ ಅಗತ್ಯವಿಲ್ಲ.
**(ಸಹೀಹ್ ಬುಖಾರಿ, ಸಂಪುಟ 3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

**ಪ್ರೀತಿ ಎಲ್ಲರಲ್ಲೂ, ದ್ವೇಷವಿಲ್ಲ ಯಾರಲ್ಲೂ**

**Love for All, Hatred for None**

يٰۤاَيُّهَا الَّذِيْنَ اٰمَنُوْا كُتِبَ عَلَيْكُمُ الصِّيَامُ

**ಎಲ್ಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ವ್ರತಾನುಷ್ಠಾನವನ್ನು ವಿಧಿಸಲಾಗಿದೆ!!**

وَاَنْ تَصُوْمُوْا خَيْرٌ لَّكُمْ اِنْ كُنْتُمْ تَعْلَمُوْنَ

**ನೀವು ಗ್ರಹಿಸುವಿರಾದರೆ ವ್ರತಾನುಷ್ಠಾನ ನಿಮಗೆ ಗುಣಕರವಾಗಿದೆ.**

يٰۤاَيُّهَا الَّذِيْنَ اٰمَنُوْا كُتِبَ عَلَيْكُمُ الصِّيَامُ كَمَا كُتِبَ عَلَى الَّذِيْنَ مِنْ قَبْلِكُمْ لَعَلَّكُمْ تَتَّقُوْنَ۝ اَيَّامًا مَّعْدُوْدٰتٍ ؕ فَمَنْ كَانَ مِنْكُمْ مَّرِيْضًا اَوْ عَلٰى سَفَرٍ فَعِدَّةٌ مِّنْ اَيَّامٍ اُخَرَ ؕ وَعَلَى الَّذِيْنَ يُطِيْقُوْنَهٗ فِدْيَةٌ طَعَامُ مِسْكِيْنٍ ؕ فَمَنْ تَطَوَّعَ خَيْرًا فَهُوَ خَيْرٌ لَّهٗ ؕ وَاَنْ تَصُوْمُوْا خَيْرٌ لَّكُمْ اِنْ كُنْتُمْ تَعْلَمُوْنَ۝ (بقرہ: 184-185)

ಅಂದರೆ :: ಎಲ್ಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ವ್ರತಾನುಷ್ಠಾನವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ. (ಈ ಉಪವಾಸವನ್ನು) ಕೆಲವು ನಿರ್ದಿಷ್ಟ ದಿನಗಳಲ್ಲಿ ಅನುಷ್ಠಿಸಬೇಕಾಗಿದೆ. ಆದರೆ ನಿಮ್ಮಲ್ಲಿ ಯಾರಾದರೂ ರೋಗಿ ಅಥವಾ ಯಾತ್ರಿಕನಾಗಿದ್ದರೆ ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ಣಗೊಳಿಸಲಿ. (ಉಪವಾಸ ಮಾಡಲು ದೈಹಿಕ ನಿಶ್ಯಕ್ತಿಯಿದ್ದು ಆರ್ಥಿಕವಾಗಿ) ಸಮರ್ಥರಿದ್ದರೆ ಅವರು ಪ್ರಾಯಶ್ಚಿತ್ತವಾಗಿ ಒಬ್ಬ ನಿರ್ಗತಿಕನಿಗೆ ಆಹಾರವನ್ನು ನೀಡಬೇಕಾಗಿದೆ. ಇನ್ನು ಯಾರಾದರೂ ಪೂರ್ಣವಾದ ಅನುಸರಣೆಯನ್ನು ತೋರಿಸುತ್ತಾ ಏನಾದರೂ ಒಳಿತನ್ನು ಮಾಡುವುದಾದರೆ ಅದು ಆತನಿಗೆ ಉತ್ತಮ. ನೀವು ಗ್ರಹಿಸುವಿರಾದರೆ ವ್ರತಾನುಷ್ಠಾನ ನಿಮಗೆ ಗುಣಕರವಾಗಿದೆ.

## ಈ ತಿಂಗಳು ಹೃದಯದ ಜ್ಞಾನೋದಯಕ್ಕೆ ಉತ್ತಮ ತಿಂಗಳು ಎಂದು ಸೂಫಿಯರು ಬರೆಯುತ್ತಾರೆ, ಇದರಲ್ಲಿ ಹೆಚ್ಚುಹೆಚ್ಚಾಗಿ ದಿವ್ಯಜ್ಞಾನ ಪ್ರಕಟಗೊಳ್ಳುತ್ತದೆ. ಸಲಾತ್ ಆತ್ಮವನ್ನು ಶುದ್ಧಗೊಳಿಸುತ್ತದೆ ಮತ್ತು ಉಪವಾಸವು ಹೃದಯವನ್ನು ಸಾಕ್ಷಾತ್ಕಾರಗೊಳಿಸುತ್ತದೆ

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಮಗ್ರಿಬ್ ನಮಾಝಿನ ಕೆಲವು ನಿಮಿಷಗಳ ಮೊದಲು ಪವಿತ್ರ ರಂಝಾನ್ ತಿಂಗಳ ಚಂದ್ರನ ದರ್ಶನವಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಗ್ರಿಬ್ ನಮಾಝ್ ನಿರ್ವಹಿಸಿ ಮಸೀದಿಯ ಛಾವಣಿಯ ಮೇಲೆ ಚಂದ್ರನನ್ನು ನೋಡಲು ಹೋಗಿ ಚಂದ್ರನನ್ನು ನೋಡಿ ಪುನಃ ಮಸೀದಿಗೆ ತೆರಳಿ ಹೇಳಿದರು: ಕಳೆದ ರಂಝಾನ್ ನಿನ್ನೆ ಕಳೆದುಹೋದಂತೆ ತೋರುತ್ತದೆ, **ಶಹರು ರಮಝಾನಲ್ಲಝೀ ಉನ್‌ಝಿಲ ಫೀಹಿಲ್ ಖುರ್‌ಆನ್** ಪವಿತ್ರ ಖುರ್‌ಆನಿನಲ್ಲಿ ಪ್ರಕಟವಾದ ರಮಝ಼ಾನ್ ತಿಂಗಳ ಹಿರಿಮೆಯನ್ನು ತೋರಿಸುವ ನುಡಿಗಟ್ಟು ಕೂಡ ಆಗಿದೆ. ಈ ತಿಂಗಳು ಹೃದಯ ಜ್ಞಾನೋದಯಕ್ಕೆ ಉತ್ತಮ ತಿಂಗಳು ಎಂದು ಸೂಫಿಯರು ಬರೆಯುತ್ತಾರೆ. ಮತ್ತು ಇದರಲ್ಲಿ ಹೆಚ್ಚುಹೆಚ್ಚಾಗಿ ದಿವ್ಯಜ್ಞಾನ ಪ್ರಕಟಗೊಳ್ಳುತ್ತದೆ, ಸಲಾತ್ ಆತ್ಮವನ್ನು ಶುದ್ಧಗೊಳಿಸುತ್ತದೆ ಮತ್ತು ಉಪವಾಸವು ಹೃದಯವನ್ನು ಸಾಕ್ಷಾತ್ಕಾರಗೊಳಿಸುತ್ತದೆ. ಆತ್ಮ ಶುದ್ಧಿ ಎಂದರೆ ದುಷ್ಪ್ರೇರಕ ಆತ್ಮವು ಕಾಮೇಚ್ಛೆಗಳಿಂದ ದೂರ ಉಳಿಯುವುದು ಮತ್ತು ಹೃದಯವು ಸಾಕ್ಷಾತ್ಕಾರಗೊಳ್ಳುವುದು ಎಂದರೆ ಅದೃಶ್ಯ ವಿಷಯಗಳ ಬಾಗಿಲು ಅವನ ಮೇಲೆ ತೆರೆಯಲಾಗುವುದು ಅದರಿಂದ ಅವನು ಅಲ್ಲಾಹನನ್ನು ನೋಡುವನು. ಹೀಗಾಗಿ **ಉನ್‌ಝಿಲ ಫೀಹಿಲ್ ಖುರ್‌ಆನ್** ನಲ್ಲಿ ಇದನ್ನೆ ಸೂಚಿಸಲಾಗಿದೆ. ಉಪವಾಸದ ಪ್ರತಿಫಲವು ದೊಡ್ಡದಾಗಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ಆದರೆ ರೋಗಗಳು ಮತ್ತು ಕಾಯಿಲೆಗಳು ಈ ಅನುಗ್ರಹದಿಂದ ಮನುಷ್ಯನನ್ನು ಕಸಿದುಕೊಳ್ಳುತ್ತವೆ, ನನ್ನ ಯೌವನದಲ್ಲಿ ನಾನು ಒಮ್ಮೆ ಉಪವಾಸವನ್ನು ಸುನ್ನತ್ ಅಹ್ಲುಲ್ ಬೈತ್ ಎಂದು ಕನಸು ಕಂಡೆ ಎಂದು ನನಗೆ ನೆನಪಿದೆ, ನನ್ನ ಬಗ್ಗೆ ದೇವರ ಪ್ರವಾದಿ ಹೇಳಿದರು: **ಸಲ್ಮಾನು ಮಿನ್ನಾ ಅಹ್ಲಲ್ ಬೈತಿ–** ಸಲ್ಮಾನ್ ಅಂದರೆ **ಅಸ್ಸುಲ್‌ಹಾನ್** ಅಂದರೆ ಆ ವ್ಯಕ್ತಿಯಿಂದ ಎರಡು ಸಂಧಾನಗಳು ನಡೆಯುವುವು. ಒಂದು ಆಂತರಿಕ, ಇನ್ನೊಂದು ಬಾಹ್ಯ ಇದನ್ನು

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**“ಓ ಮುಹಮ್ಮದ್(ಸ)! ನನಗೆ ಜನರ ಭಯವಿರಲಿಲ್ಲ, ಆದರೆ ನಿಮ್ಮನ್ನು ನೋಡಿದಾಗ ನನ್ನ ಮನಸ್ಸು ಖಾಲಿಯಾಯಿತು ಮತ್ತು ನನ್ನ ಹೃದಯ ದುರ್ಬಲವಾಯಿತು. ನಂತರ ನಾನು ನನ್ನ ಉದ್ದೇಶವನ್ನು ಅರಿತುಕೊಂಡೆ, ಅದು ನನ್ನ ದೃಢನಿಶ್ಚಯವಾಗಿತ್ತು, ಇದನ್ನು ಅನೇಕ ಸವಾರರು ಸಾಧಿಸಲು ಪ್ರಯತ್ನಿಸಿದ್ದರು, ಆದರೆ ಯಾರೂ ಯಶಸ್ವಿಯಾಗಲಿಲ್ಲ. ನೀವು ರಕ್ಷಿಸಲ್ಪಟ್ಟಿದ್ದೀರಿ ಮತ್ತು ನೀವು ನಿಜವಾಗಿಯೂ ಸರಿಯಾದ ಹಾದಿಯಲ್ಲಿದ್ದೀರಿ ಎಂದು ನನಗೆ ತಿಳಿದಿದೆ, ಅಂದರೆ ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನು ರಕ್ಷಿಸುತ್ತಾನೆ ಮತ್ತು ಅಬುಸುಫ್ಯಾನ್ ಸೈನ್ಯವು ಸೈತಾನನ ಸೈನ್ಯವಾಗಿದೆ.**

ಹಝ್ರತ್ ಪೈಗಂಬರ್(ಸ)ರು ಅಮ್ರ್ ಇಬ್ನ್ ಉಮಯ್ಯ ಮತ್ತು ಸಲಮ ಇಬ್ನ್ ಅಸ್ಲಂ ಅವರನ್ನು ಅಬುಸುಫ್ಯಾನ್ ಇಬ್ನ್ ಹರ್ಬ್ ಬಳಿಗೆ ಕಳುಹಿಸಿದರು ಮತ್ತು ಹೇಳಿದರು, “ನೀವಿಬ್ಬರೂ ಅವನನ್ನು ನಿರ್ಲಕ್ಷ್ಯದ ಸ್ಥಿತಿಯಲ್ಲಿ ಕಂಡುಕೊಂಡರೆ, ಅವನನ್ನು ವಧಿಸಿರಿ.”

**ಸರಿಯ್ಯ ಅಬ್ದುಲ್ಲಾ ಬಿನ್ ರವಾಹ ಉಸೈರ್ ಬಿನ್ ರಿಝಾಮ್ ಕಡೆಗೆ ಮತ್ತು ಸರಿಯ್ಯ ಅಮ್ರೊ ಬಿನ್ ಉಮೈಯ ಝುಮ್ರಿ ವಿನ ವಿವರಣೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಪವಿತ್ರ ಜೀವನಚರಿತ್ರೆಯ ವಿವರಾತ್ಮಕ ಪ್ರಸ್ತಾವನೆ**

ಮಾನ್ಯ ಶೇಖ್ ಮುಬಾರಕ್ ಅಹ್ಮದ್ ಸಾಹಿಬ್ (ನಾಝಿರ್ ದೀವಾನ್ ರಬ್ವಾ), ಮಾನ್ಯ ಮುಹಮ್ಮದ್ ಮುನೀರ್ ಅದಲ್ಬಿ ಸಾಹಿನ್, ಮತ್ತು ಮಾನ್ಯ ಅಬ್ದುಲ್ ಬಾರಿ ತಾರಿಖ್ ಸಾಹಿಬ್ (ಇಂಚಾರ್ಜ್ ಕಂಪ್ಯೂಟರ್ ಸೆಕ್ಷನ್ ವಖ್ಫೆ ಜದೀದ್ ರಬ್ವಾ) ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝು ಜನಾಝು ಗ್ವಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **‘ಮಸ್ಜಿದ್ ಮುಬಾರಕ್’** ನಿಂದ **17–01–2025** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ . اَلرَّحْمٰنِ الرَّحِيمِ . مٰلِكِ يَوْمِ الدِّينِ .

إِيَّاكَ نَعْبُدُ وَإِيَّاكَ نَسْتَعِينُ . اِهْدِنَا الصِّرَاطَ الْمُسْتَقِيمَ .

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ .

ಇಂದು ಪ್ರಸ್ತಾಪಿಸಲಾಗುವ ಕಾರ್ಯಾಚರಣೆಗಳಲ್ಲಿ ಒಂದು ಉಸೈರ್ ಬಿನ್ ರಿಝಾ಼ಮ್‌ನ ಕಡೆಗೆ ನಡೆಸಲಾದ ಅಬ್ದುಲ್ಲಾಹ್ ಬಿನ್ ರವಾಹ್‌ರ ಕಾರ್ಯಾಚರಣೆಯಾಗಿದೆ. ಈ ಕಾರ್ಯಾಚರಣೆ ಹಿಜರಿ 6ರಲ್ಲಿ ಉಸೈರ್ ಅಥವಾ ಉಸೈರ್ ಬಿನ್ ರಿಝಾ಼ಮ್‌ನ ಕಡೆಗೆ ಖೈಬರ್‌ನಲ್ಲಿ ನಡೆಯಿತು.

ಇದರ ವಿವರಣೆ ಏನೆಂದರೆ, ಅಬೂ ರಾಫೀಅ್ ಬಿನ್ ಅಬಿಲ್ ಹಖೀಖ್‌ನನ್ನು ವಧಿಸಲಾದಾಗ ಯಹೂದಿಯರು ಉಸೈರ್ ಬಿನ್ ರಿಝಾ಼ಮ್‌ನನ್ನು ತಮ್ಮ ಅಮೀರ್ ಆಗಿ ನಿಶ್ಚಯಿಸಿದರು. ಆತನು ಯಹೂದಿಯರನ್ನು ಸಂಬೋಧಿಸಿ ಹೀಗೆ ಹೇಳಿದನು: ಅಲ್ಲಾಹನ ಆಣೆ!! ಮುಹಮ್ಮದ್(ಸ) ಯಾವುದೇ ಯಹೂದಿಗಳ ಬಳಿಗೆ ಹೋದಾಗ ಅಥವಾ ಅವರ ಯಾವುದೇ ಸಹಚರರನ್ನು ಕಳುಹಿಸಿದಾಗ, ಅವರು ಉದ್ದೇಶಿಸಿದ್ದರಲ್ಲಿ ಯಶಸ್ವಿಯಾದರು, ಆದರೆ ನನ್ನ ಜೊತೆಗಾರರರಲ್ಲಿ ಯಾರೂ ಮಾಡಿರದಂತಹ ಒಂದು ಕೆಲಸವನ್ನು ನಾನು ಮಾಡುವೆನು. ಅದಕ್ಕೆ ಯಹೂದಿಯರು ಕೇಳಿದರು, ನೀವು ಏನು ಮಾಡಲು ಉದ್ದೇಶಿಸಿದ್ದೀರಿ? ಉಸೈರ್ ಬಿನ್ ರಿಝುಮ್ ಹೇಳಿದನು, ನಾನು ಗ಼ತ್‌ಫಾನ್ ಗೋತ್ರದ ಕಡೆಗೆ ಹೋಗಿ ಅವರನ್ನು ಒಂದುಗೂಡಿಸಿವೆನು. ನಾವು ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್)ರ ಬಳಿಗೆ ಹೋಗಿ ಅವರ ಮನೆಗೆ ನುಗ್ಗುವೆವು. ಯಾವನಾದರೂ ತನ್ನ ಶತ್ರುವಿನ ಮನೆಗೆ ಹೋಗಿ ದಾಳಿ ನಡೆಸಿದರೆ ಆತನು ತನ್ನ ಉದ್ದೇಶದಲ್ಲಿ ಸಾಕಷ್ಟು ಮಟ್ಟಿಗೆ ಸಫಲನಾಗುತ್ತಾನೆ. ಆಗ ಆ ಯಹೂದೀಯರು ಹೇಳಿದರು, ನಿಮ್ಮ ಉಪಾಯ ತುಂಬಾ ಚೆನ್ನಾಗಿದೆ. ಹೀಗೆ ಆತನು ಗ಼ತ್‌ಫಾನ್ ಮತ್ತು ಇತರ ಗೋತ್ರಗಳ ಕಡೆಗೆ ಹೋಗಿ ರಸೂಲುಲ್ಲಾಹ್(ಸ)ರ ವಿರುದ್ಧ ಯುದ್ಧಕ್ಕಾಗಿ ಜನರನ್ನು ಒಟ್ಟುಗೂಡಿಸಲು ತೊಡಗಿದನು. ಈ ಸುದ್ದಿ ಹಝ್ರತ್ ಪೈಗಂಬರ್(ಸ) ಅವರಿಗೆ ತಲುಪಿದಾಗ, ಅವರು ಈ ಸುದ್ದಿಯ ಸತ್ಯಾಸತ್ಯತೆಯನ್ನು ಸ್ಪಷ್ಟಪಡಿಸಲು ರಮಝಾನ್ ತಿಂಗಳಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಅವರನ್ನು ಮೂರು ಜನರೊಂದಿಗೆ ರಹಸ್ಯವಾಗಿ ಕಳುಹಿಸಿದರು. (ಸಬ್ ಅಲ್–ಹುದಾ, ಸಂಪುಟ 6, ಪುಟ 111, ದಾರ್ ಅಲ್–ಕುತುಬ್ ಅಲ್–ಇಲ್ಮಿಯ, ಬೈರುತ್)

ಅದರ ವಿವರಣೆಯಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ)ರಿಗೆ ಈ ಸ್ಥಿತಿಗಳ ಬಗ್ಗೆ ಗೊತ್ತಾದಾಗ ಅವರು ಕೂಡಲೇ ಅನ್ಸಾರಿ ಸಹಾಬಿಯಾದ ಅಬ್ದುಲ್ಲಾಹ್ ಬಿನ್ ರವಾಹ್(ರ)ರನ್ನು ಇತರ ಮೂರು ಸಹಾಬಿಯರ ಜೊತೆಗೆ ಖೈಬರ್‌ನ ಕಡೆಗೆ ಕಳುಹಿಸಿದರು. ಹೀಗೆ ಅಬ್ದುಲ್ಲಾಹ್ ಬಿನ್ ರವಾಹ(ರ) ಮತ್ತು ಅವರ ಜೊತೆಗಾರರು ಹೊರಟರು ಮತ್ತು ರಹಸ್ಯವಾಗಿ ಎಲ್ಲ ಸ್ಥಿತಿಗತಿಗಳನ್ನು ಹಾಗೂ ಅವಸ್ಥೆಗಳ ಮಾಹಿತಿ ಪಡೆದು ಲಭಿಸಿದ ಸುದ್ದಿಗಳು ಸರಿಯೆಂದು ಗೊತ್ತುಮಾಡಿ ಅಲ್ಲಿಂದ ಹಿಂದಿರುಗಿದರು. ಅದಲ್ಲದೆ, ಅಬ್ದುಲ್ಲಾ ಬಿನ್ ರವಾಹ ಮತ್ತು ಅವರ ಸಹಚರರು ಎಷ್ಟು ಕುತಂತ್ರದಿಂದ ವರ್ತಿಸಿದರು ಎಂದರೆ ಖೈಬರ್‌ನ ಕೋಟೆಗಳನ್ನು ಸುತ್ತಾಡಿ ಉಸೈರ್ ಬಿನ್ ರಿಝಾಮ್‌ನ ಸಭೆಯ ಸ್ಥಳಗಳನ್ನು ತಲುಪಿದ ನಂತರ, ಅವರು ಉಸೈರ್ ಮತ್ತು ಅವನ ಸಹಚರರಿಂದ ಹಝ್ರತ್ ಪೈಗಂಬರ್(ಸ) ರ ವಿರುದ್ಧ ಸಂಚು ರೂಪಿಸುತ್ತಿದ್ದಾರೆಂದು ಕೇಳಿದರು. ಅದೇ ದಿನಗಳಲ್ಲಿ ಒಬ್ಬ ಮುಸ್ಲಿಮೇತರ ವ್ಯಕ್ತಿಯಾದ ಖಾ಼ರಿಜ ಬಿನ್ ಹುಸೈಲ್ ಆಕಸ್ಮಿಕವಾಗಿ ಖೈಬರ್‌ನಿಂದ ಮದೀನಕ್ಕೆ ಬಂದನು ಮತ್ತು ಅಬ್ದುಲ್ಲಾಹ್ ಬಿನ್ ರವಾಹ್(ರ)ರಿಗೆ ಲಭಿಸಿದ ಮಾಹಿತಿ ಸರಿ ಎಂದು ಆತನು ಹೇಳಿದನು. ಮತ್ತು ನಾನು ಉಸೈರ್‌ನನ್ನು ಮದೀನಾದ ಮೇಲೆ ದಾಳಿ ಮಾಡಲು ತನ್ನ ಸೈನ್ಯವನ್ನು ಒಟ್ಟುಗೂಡಿಸುತ್ತಿದ್ದ ಸ್ಥಿಯಲ್ಲಿ ಬಿಟ್ಟು ಬಂದಿರುವೆನು ಎಂದು ಹೇಳಿದನು.

ಈ ರುಜುವಾತಿನ ನಂತರ ಅಬ್ದುಲ್ಲಾಹ್ ಬಿನ್ ರವಾಹ್(ರ)ರ ನಾಯಕತ್ವದಲ್ಲಿ ಮೂವತ್ತು ಸಹಾಬಿಯರ ಒಂದು ತುಕಡಿಯನ್ನು ಖೈಬರ್‌ನ ಕಡೆಗೆ ಹಝ಼್ರತ್ ಪೈಗಂಬರ್(ಸ) ಕಳುಹಿಸಿದರು. ಹಝ್ರತ್ ಪೈಗಂಬರ್(ಸ)ರು ಅವರನ್ನು ಕಳುಹಿಸುವ ಮೊದಲು ಈ ಸೈನ್ಯವನ್ನು ಯಾವ ಸೂಚನೆಗಳನ್ನು ನೀಡಿದರು ಎಂಬುದು ವರದಿಗಳಿಂದ ತಿಳಿದಿಲ್ಲವಾದರೂ, ಅಬ್ದುಲ್ಲಾಹ್ ಬಿನ್ ರವಾಹ(ರ) ಮತ್ತು ಉಸೈರ್ ಬಿನ್ ರಿಝಾ಼ಮ್‌ನ ನಡುವೆ ಖೈಬರ್‌ನಲ್ಲಿ ನಡೆದ ಮಾತುಕತೆಯಿಂದ ಗೊತ್ತಾಗುವುದೇನೆಂದರೆ, ಉಸೈರ್‌ನನ್ನು ಮದೀನಕ್ಕೆ ಕರೆದು ತಂದು ಆಗುತ್ತಿರುವ ಪಿತೂರಿಗಳು ನಿಂತುಹೋಗುವಂತಹ ಹಾಗೂ ದೇಶದಲ್ಲಿ ಶಾಂತಿ ಮತ್ತು ನೆಮ್ಮದಿಯ ಸ್ಥಿತಿ ಉಂಟುಮಾಡುವಂತಹ ಒಂದು ಒಪ್ಪಂದವನ್ನು ಮಾಡಬೇಕೆಂದು ಹಝ಼್ರತ್ ಪೈಗಂಬರ್(ಸ) ಬಯಸಿದ್ದರು. ಈ ಉದ್ದೇಶವನ್ನು ಈಡೇರಿಸಲು ಹಝ಼್ರತ್ ಪೈಗಂಬರ್(ಸ) ಎಷ್ಟರ ಮಟ್ಟಿಗೆ ತಯಾರಾಗಿದ್ದರು ಎಂದರೆ, ಭವಿಷ್ಯದಲ್ಲಿ ಮುಸ್ಲಿಮರ ವಿರುದ್ಧ ದೇಶದ್ರೋಹವನ್ನು ಪ್ರಚೋದಿಸುವುದನ್ನು ತಡೆಯುವವರೆಗೆ, ಹುಝೂರ್(ಸ)ರು ಉಸೈರ್‌ನನ್ನು ಖೈಬರಿನ ಪ್ರದೇಶದ ಅಮೀರ್ ಆಗಿ ಒಪ್ಪಬೇಕಾಗಿ ಬಂದರೆ ಅದನ್ನು ಕೂಡ ಒಪ್ಪಲು ಸಿದ್ಧರಾಗಿದ್ದರು.

ಅಬ್ದುಲ್ಲಾ ಬಿನ್ ರವಾಹ ಅವರ ತಂಡ ಖೈಬರ್‌ಗೆ ಬಂದಾಗ, ಅವರು ಮಾಡಿದ ಮೊದಲ ಕೆಲಸವೆಂದರೆ ಅವರ ಮಾತುಕತೆಯ ಸಮಯದಲ್ಲಿ ಉಸೈರ್ ಬಿನ್ ರಿಝಾ಼ಮ್‌ನಿಂದ ಶಾಂತಿ ಮತ್ತು ಭದ್ರತೆಯ ಪ್ರತಿಜ್ಞೆಯನ್ನು ತೆಗೆದುಕೊಂಡರು, ಇದು ಅಪಾಯವು ಎಷ್ಟರ ಮಟ್ಟಿಗೆ

ಹೆಚ್ಚಿದೆ ಎಂಬುದನ್ನು ತೋರಿಸುತ್ತದೆ, ಈ ಸಂಭಾಷಣೆಯ ಸಮಯದಲ್ಲಿ ಉಸೈರ್ ಕಡೆಯಿಂದ ಏನಾದರೂ ವಿಶ್ವಾಸಘಾತುಕತನ ಸಂಭವಿಸಬಹುದು ಎಂದು ಮುಸ್ಲಿಮರು ನಂಬಿದ್ದರು. ಉಸೈರ್ ಹೀಗೆ ಏನೂ ಸಂಭವಿಸುವುದಿಲ್ಲ ಎಂದು ಒಪ್ಪಿಕೊಂಡನು." ಸರಿ, ನಾನು ಒಪ್ಪಂದ ಮಾಡಿಕೊಳ್ಳುತ್ತೇನೆ. "ಆದರೆ ಈ ವಿಷಯದಲ್ಲಿ ಅಬ್ದುಲ್ಲಾ ಬಿನ್ ರವಾಹ ಅವರ ಉಪಕ್ರಮವು ನಿಜವಾದ ಬೆದರಿಕೆ ಯಾರಿಂದ ಬಂದಿದೆ ಎಂಬುದನ್ನು ತೋರಿಸುತ್ತದೆ. ಆದಾಗ್ಯೂ, ಈ ಹೇಳಿಕೆ ಮತ್ತು ಒಪ್ಪಂದದ ನಂತರ, ಅಬ್ದುಲ್ಲಾ ಬಿನ್ ರವಾಹ ಉಸೈರ್ ಜೊತೆ ಸಂಭಾಷಣೆಯನ್ನು ಪ್ರಾರಂಭಿಸಿದರು, ಇದರ ಉದ್ದೇಶವೆಂದರೆ ಹಝ್ರತ್ ಪೈಗಂಬರ್(ಸ) ನಿಮ್ಮ ನಡುವಿನ ಈ ಯುದ್ಧ ನಿಲ್ಲುವಂತೆ ನಿಮ್ಮೊಂದಿಗೆ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳಲು ಬಯಸುತ್ತಾರೆ, ಮತ್ತು ಇದನ್ನು ಮಾಡಲು ಉತ್ತಮ ಮಾರ್ಗವೆಂದರೆ ನೀವೇ ಮದೀನಾಗೆ ಹೋಗಿ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಮುಖಾಮುಖಿಯಾಗಿ ಮಾತನಾಡುವುದು. ಅಂತಹ ಒಪ್ಪಂದವು ಸಂಭವಿಸಿದರೆ, ಹಝ್ರತ್ ಪೈಗಂಬರ್(ಸ)ರು ನಿಮ್ಮೊಂದಿಗೆ ದಯೆಯಿಂದ ವರ್ತಿಸುತ್ತಾರೆ ಮತ್ತು ನೀವು ಖೈಬರ್‌ನ ಅಧಿಕೃತ ಆಡಳಿತಗಾರರಾಗಿ ಗುರುತಿಸಲ್ಪಡುವ ಸಾಧ್ಯತೆಯಿದೆ ಎಂದು ನಾನು ಭಾವಿಸುತ್ತೇನೆ. ಬಹಳ ಮಹತ್ವಾಕಾಂಕ್ಷೆಯುಳ್ಳವನಾಗಿದ್ದ ಅಥವಾ ಅವನ ಹೃದಯದಲ್ಲಿ ಬೇರೆ ಯಾವುದೋ ಉದ್ದೇಶ ಅಡಗಿರುವ ಸಾಧ್ಯತೆಯೂ ಇದ್ದ ಉಸೈರ್, ಈ ಪ್ರಸ್ತಾಪವನ್ನು ಇಷ್ಟಪಟ್ಟನು ಮತ್ತು ಕನಿಷ್ಠ ಪಕ್ಷ ಈ ಪ್ರಸ್ತಾಪವನ್ನು ಅವನು ಇಷ್ಟಪಟ್ಟಿದ್ದಾನೆಂದು ತೋರಿಸಿದನು, ಆದರೆ ಅದೇ ಸಮಯದಲ್ಲಿ ಅವನು ಖೈಬರ್‌ನ ಯಹೂದಿ ನಾಯಕರನ್ನು ಒಟ್ಟುಗೂಡಿಸಿ ಮುಸ್ಲಿಮರು ಮಂಡಿಸಿದ ಈ ಪ್ರಸ್ತಾಪದ ಬಗ್ಗೆ ಏನು ಮಾಡಬೇಕೆಂದು ಸಲಹೆ ಕೇಳಿದನು. ಇಸ್ಲಾಂ ವಿರುದ್ಧದ ಸಾಮಾನ್ಯ ದ್ವೇಷದಿಂದ ಕುರುಡರಾಗಿದ್ದ ಯಹೂದಿಗಳು ಸಾಮಾನ್ಯವಾಗಿ ಈ ಪ್ರಸ್ತಾಪವನ್ನು ವಿರೋಧಿಸಿದರು ಮತ್ತು ಉಸೈರ್‌ನನ್ನು ಈ ಉದ್ದೇಶದಿಂದ ದೂರವಿಟ್ಟರು. ಅವರು ಹೇಳಿದರು, "ಮುಹಮ್ಮದ್(ಸ) ನಿಮ್ಮನ್ನು ಖೈಬರ್‌ನ ಅಮಿರ್‌ನನ್ನಾಗಿ ಗುರುತಿಸುತ್ತಾರೆಂದು ನಾವು ಭಾವಿಸುವುದಿಲ್ಲ." ಆದರೆ ಪರಿಸ್ಥಿತಿಯ ಬಗ್ಗೆ ಹೆಚ್ಚು ಅರಿವಿದ್ದ ಉಸೈರ್, ತನ್ನ ಮಾತಿನಲ್ಲಿಯೇ ನಿಂತು, "ಮುಹಮ್ಮದ್ ಈ ಯುದ್ಧದಿಂದ ಬೇಸತ್ತಿದ್ದಾರೆ ಮತ್ತು ಹೋರಾಟವು ಹಾಗೆಯೇ ನಿಲ್ಲಬೇಕೆಂದು ಪ್ರಾಮಾಣಿಕವಾಗಿ ಬಯಸುತ್ತಾರೆಂದು ನಿಮಗೆ ತಿಳಿದಿಲ್ಲವೇ" ಎಂದು ಹೇಳಿದನು.

ಈ ನಿಟ್ಟಿನಲ್ಲಿ, ಅಬ್ದುಲ್ಲಾಹ್ ಬಿನ್ ರವಾಹ್‌ನ ತಂಡದೊಂದಿಗೆ ಮದೀನಕ್ಕೆ ಹೊರಡಲು ಉಸೈರ್ ತಯಾರಾದನು. ಅಬ್ದುಲ್ಲಾಹ್ ಬಿನ್ ರವಾಹ್(ರ)ರ ಹಾಗೆಯೇ ಆತನು ಕೂಡ ಮೂವತ್ತು ಯಹೂದಿಗಳನ್ನು ತನ್ನ ಜೊತೆಗೆ ಕೊಂಡು ಹೋದನು. ಈ ಎರಡೂ ಪಕ್ಷಗಳು ಖೈಬರ್‌ನಿಂದ ಹೊರಟು ಅಲ್ಲಿಂದ ಆರು ಮೈಲು ದೂರದಲ್ಲಿರುವ ಖರ್‌ಖರ ಎಂಬ ಪ್ರದೇಶಕ್ಕೆ ತಲುಪಿದಾಗ ಉಸೈರ್‌ನ ಉದ್ದೇಶ ಬದಲಾಯಿತು. ಆತ ಮೊದಲೇ ದುರುದ್ದೇಶವನ್ನು ಹೊಂದಿದ್ದನು ಎಂದಾದರೆ, ಅದನ್ನು ಪ್ರಕಟಗೊಳಿಸುವ ಸಮಯ ಬಂತು ಎಂದೂ ಹೇಳಬಹುದಾಗಿದೆ. ಆದ್ದರಿಂದ, ಅವನು ಮಾತನಾಡುತ್ತಿರುವಾಗ, ಅವನು ಬಹಳ ಚಾತುರ್ಯದಿಂದ ಮುಸ್ಲಿಂ ಪಕ್ಷದ ಗೌರವಾನ್ವಿತ ಸದಸ್ಯ ಅಬ್ದುಲ್ಲಾ ಬಿನ್ ಉನೈಸ್ ಅನ್ಸಾರಿ(ರ) ಅವರ ಕತ್ತಿಯ ಕಡೆಗೆ ಕೈ ಚಾಚಿದನು. ಆತನ ಮುಖಭಾವ ಬದಲಾಗಿರುವುದನ್ನು ಅಬ್ದುಲ್ಲಾ ತಕ್ಷಣ ಗಮನಿಸಿದರು. ಆದ್ದರಿಂದ ಅವರು ಬೇಗನೆ ತಮ್ಮ ಒಂಟೆಯನ್ನು ಕಟ್ಟಿ ಮುಂದಕ್ಕೆ ಕೊಂಡೊಯ್ದರು, ನಂತರ ಉಸೈರ್ ಕಡೆಗೆ ತಿರುಗಿ ಕೂಗಿದರು, "ಓ ದೇವರ ಶತ್ರು! ನೀನು ನಮಗೆ ದ್ರೋಹ ಮಾಡಲು ಬಯಸುತ್ತೀಯಾ?" ಅಬ್ದುಲ್ಲಾ ಬಿನ್ ಉನೈಸ್ ಈ ಮಾತುಗಳನ್ನು ಎರಡು ಬಾರಿ ಪುನರಾವರ್ತಿಸಿದರು. ಆದರೆ ಉಸೈರ್ ಉತ್ತರಿಸಲಿಲ್ಲ, ಅಥವಾ ತನ್ನನ್ನು ತಾನು ಖುಲಾಸೆಗೊಳಿಸಿಕೊಳ್ಳಲಿಲ್ಲ, ಬದಲಿಗೆ ಮುಂಭಾಗದಿಂದ ಯುದ್ಧಕ್ಕೆ ಸಿದ್ಧನಾಗಿದ್ದನು. ಇದು ಬಹುಶಃ ಯಹೂದಿಗಳಲ್ಲಿ ಪೂರ್ವನಿರ್ಧರಿತ ಸಂಕೇತವಾಗಿತ್ತು, ಅಂತಹ ಅವಕಾಶ ಲಭಿಸಿದರೆ, ಅವರೆಲ್ಲರೂ ಒಗ್ಗೂಡಿ ಮುಸ್ಲಿಮರ ಮೇಲೆ ದಾಳಿ ಮಾಡುತ್ತಾರೆ. ಹಾಗಾಗಿ, ಹೀಗೆ ಆ ಜಾಗದಲ್ಲಿ ಯಾತ್ರೆಯ ಮಾರ್ಗ ಮಧ್ಯೆದಲ್ಲೇ ಮುಸ್ಲಿಮರ ಮತ್ತು ಯಹೂದಿಯರ ನಡುವೆ ಯುದ್ಧ ಶುರುವಾಯಿತು. ಉಭಯ ಪಕ್ಷಗಳು ಸಂಖ್ಯೆಯಲ್ಲಿ ಸಮಾನವಾಗಿದ್ದುವು. ಆದರೆ ಯಹೂದಿಯರು ಮೊದಲಿನಿಂದಲೇ ಮಾನಸಿಕವಾಗಿ ಯುದ್ಧಕ್ಕಾಗಿ ಸಿದ್ಧರಾಗಿದ್ದರು ಮತ್ತು ಮುಸ್ಲಿಮರು ಯುದ್ಧದ ಉದ್ದೇಶವನ್ನು ಕಿಂಚಿತ್ತೂ ಹೊಂದಿರಲಿಲ್ಲ. ಆದಾಗ್ಯೂ ಕೆಲವು ಮುಸ್ಲಿಮರು ಗಾಯಗೊಂಡರು ಕೂಡ ಅಲ್ಲಾಹನ ಅನುಗ್ರಹದಿಂದ ಅವರಲ್ಲಿ ಯಾರಿಗೂ ಜೀವಹಾನಿ ಉಂಟಾಗಲಿಲ್ಲ. ಆದರೆ ಮತ್ತೊಂದೆಡೆ ಎಲ್ಲ ಯಹೂದಿಯರು ತಮ್ಮ ಮೋಸಗಾರಿಕೆಯ ಫಲವನ್ನು ಸವಿಯುತ್ತಾ ನಾಶವಾದರು. ಸಹಾಬಿಯರ ಈ ತಂಡ ಮದೀನಕ್ಕೆ ಮರಳಿತು. ಹಝ್ರತ್ ಪೈಗಂಬರ್(ಸ)ರಿಗೆ ಸ್ಥಿತಿಗತಿಗಳ ಬಗ್ಗೆ ಗೊತ್ತಾದಾಗ, ಮುಸ್ಲಿಮರು ಸುರಕ್ಷಿತರಾಗಿ ಮರಳಿ ಬಂದದ್ದಕ್ಕಾಗಿ ಅವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದರು. ಮತ್ತು **ಖದ್ ನಜಾಕುಮುಲ್ಲಾಹುಮಿನಲ್ ಖೌಮಿ ಝ್ಝಾಲಿಮೀನ್**– ಅಲ್ಲಾಹನು ನಿಮ್ಮನ್ನು ದುಷ್ಟ ಪಕ್ಷದಿಂದ ರಕ್ಷಿಸಿದ್ದಕ್ಕೆ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿರಿ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಮಾರ್ಗದಲ್ಲಿ ಹೊಂಚು ಹಾಕಿ ವಧಿಸಬೇಕು ಎಂಬ ಉದ್ದೇಶದಿಂದಲೇ ಉಸೈರ್ ಮುಂತಾದವರನ್ನು ಅಬ್ದುಲ್ಲಾಹ್ ಬಿನ್ ರವಾಹ್(ರ)ರ ಪಕ್ಷದವರು ಖೈಬರ್‌ನಿಂದ ಹೊರಗೆ ತಂದಿದ್ದರು ಎಂದು ಈ ಘಟನೆಯ ಕುರಿತು ಕೆಲವು ಕ್ರೈಸ್ತ ಚರಿತ್ರೆಗಾರರು ಆಕ್ಷೇಪಿಸುತ್ತಾರೆ. ಆದರೆ ಮುಸ್ಲಿಮರು ಈ ಉದ್ದೇಶದಿಂದ ಅಲ್ಲಿಗೆ ಹೋಗಿದ್ದರು ಎಂಬುದಕ್ಕೆ ಚರಿತ್ರೆಯಿಂದ ಯಾವುದೇ ಪುರಾವೆ ಲಭಿಸುವುದಿಲ್ಲ. ಅದಲ್ಲದೇ 'ಎಲೈ ಅಲ್ಲಾಹನ ಶತ್ರು, ನೀನು ಮೋಸ ಮಾಡಲು ಉದ್ದೇಶಿಸುತ್ತಿದ್ದೀಯಾ' ಎಂದು ಅಬ್ದುಲ್ಲಾಹ್ ಬಿನ್ ಉನೈಸ್(ರ) ಕೇಳಿದ ಮತ್ತು 'ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸು, ಅವನು ನಿಮ್ಮನ್ನು ಆ ದುಷ್ಟ ಪಕ್ಷದಿಂದ ರಕ್ಷಿಸಿದನು ಎಂಬ ಹಝ್ರತ್ ಪೈಗಂಬರ್(ಸ) ಹೇಳಿದ ಮಾತುಗಳ ಬಗ್ಗೆ ಮಾತ್ರ ಚಿಂತಿಸುವುದಾದರೆ, ಇತರ ಸಾಕ್ಷ್ಯಾಧಾರಗಳನ್ನು ಕಡೆಗಣಿಸಿದರೆ ಕೂಡ ಮುಸ್ಲಿಮರ ಉದ್ದೇಶ ಪೂರ್ಣವಾಗಿಯೂ ಒಳ್ಳೆಯದು ಮತ್ತು ಶಾಂತಿಪೂರ್ಣವಾಗಿತ್ತು ಎಂಬುದಕ್ಕೆ ಈ ಮಾತುಗಳೇ ಸಾಕಾದ ಪುರಾವೆಗಳಾಗಿವೆ. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟಗಳು 739 ರಿಂದ 741) ಆದಾಗ್ಯೂ, ಇದು ಈ ಕಾರ್ಯಾಚರಣೆಯ ಅಂತ್ಯವಾಗಿತ್ತು.

ಮತ್ತೊಂದು ಕಾರ್ಯಾಚರಣೆ ಅಬೂಸುಫ್‌ಯಾನಿನ ಕಡೆಗೆ ಅಮ್ರ್ ಬಿನ್ ಉಮಯ್ಯ ಝುಮ್‌ರಿಯ ಕಾರ್ಯಾಚರಣೆಯಾಗಿದೆ. ಇಬ್ನು ಹಿಶಾಂ, ಇಬ್ನು ಕಸೀರ್ ಮತ್ತು ತಬರೀ ಮುಂತಾದವರು ಈ ಕಾರ್ಯಾಚರಣೆಯನ್ನು ರಜೀಅ್‌ನ ಘಟನೆಯ ನಂತರ ಹಿಜರೀ 4ರಲ್ಲಿ ನಡೆದದ್ದಾಗಿ ಹೇಳಿರುವರು. ಆದರೆ ಇಬ್ನು ಸಅದ್ ಮತ್ತು ಝುರ್‌ಖಾನಿ ಈ ಕಾರ್ಯಾಚರಣೆಯನ್ನು ಹಿಜರೀ 6ರಲ್ಲಿ ನಡೆದ ಕಾರ್ಯಾಚರಣೆಗಳ ಪಟ್ಟಿಯಲ್ಲಿ ಸೇರಿಸಿರುವರು. (ಅಸ್ಸೀರತುನ್ನಬವಿ ಲಿಇಬ್ನ್ ಹಿಶಾಮ್, ಪುಟ–885, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಸ್ಸೀರತುನ್ನಬವೀಯಾ ಲಿಇಬ್ನ್ ಕಸೀರ್, ಸಂಪುಟ–3, ಪುಟ–135, ದಾರುಲ್–ಮಾರಿಫಾ, ಬೈರುತ್) (ತಾರಿಖ್ ಅತ್ತಬರಿ, ಸಂಪುಟ–2, ಪುಟ–79, ದಾರುಲ್–ಕುತುಬ್ ಇಲ್ಮಿಯಾ, ಬೈರುತ್) (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟಗಳು 71, 72, ದಾರುಲ್ ಕುತುಬ್ ಇಲ್ಮಿಯಾ, ಬೈರುತ್) (ಜರ್ಕಾನಿ, ಸಂಪುಟ–3, ಪುಟಗಳು 166 ರಿಂದ 169, ದಾರುಲ್ ಕುತುಬ್ ಅಲ್–ಇಲ್ಮಿಯಾ, ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಸಹ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಈ ಕಾರ್ಯಾಚರಣೆ ಹಿಜರೀ 6ರದ್ದು ಎಂದು ಹೇಳಿರುವರು. ಮತ್ತು ಅದರ ವಿವರಣೆಯಲ್ಲಿ ಹೀಗೆ ಬರೆದಿದ್ದಾರೆ "ಈ ಕರ್ಯಾಚರಣೆಯ ದಿನಾಂಕದ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯವಿದೆ. ಇಬ್ನ್ ಹಿಶಾಮ್ ಮತ್ತು ತಬರಿ ಇದನ್ನು ಹಿಜ್ರಿ 4 ರಲ್ಲಿ ನಿರೂಪಿಸುತ್ತಾರೆ, ಆದರೆ ಇಬ್ನ್ ಸಅದ್ ಇದನ್ನು ಹಿಜ್ರಿ 6 ರಲ್ಲಿ ಬರೆದಿದ್ದಾರೆ ಮತ್ತು ಅಲ್ಲಾಮ ಕಸ್ತಲಾನಿ ಮತ್ತು ಜರ್ಕಾನಿ ಇಬ್ನ್ ಸಅದ್ ಅವರ ವರದಿಯನ್ನು ಆದ್ಯತೆ ನಿಡುತ್ತಾರೆ. ಆದ್ದರಿಂದ, ಅವರು ಬರೆಯುತ್ತಾರೆ, "ನಾನು ಇದನ್ನು 6 ಹಿಜರಿ ಎಂದೇ ವಿವರಿಸಿದ್ದೇನೆ." ಅಲ್ಲಾಹನು ಬಲ್ಲವನಾಗಿದ್ದಾನೆ. ಇಬ್ನ್ ಸಅದ್ ಅವರ ವರದಿಯ ಅರ್ಥವನ್ನು ಬೈಹಕಿ ಕೂಡ ಬೆಂಬಲಿಸಿದ್ದಾರೆ, ಆದರೆ ಅದು ಈ ಘಟನೆಯ ಸಮಯವನ್ನು ಸೂಚಿಸುವುದಿಲ್ಲ."

(ಸೀರತ್ ಖಾತಮನ್ನಬಿಯ್ಯಿನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ.ಅ) ಎಂ.ಎ. ಪುಟ–743)

ಈ ಕಾರ್ಯಾಚರಣೆಯ ವಿವರಣೆ ಹೀಗಿದೆ: ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಮಾರುಕಟ್ಟೆಯಲ್ಲಿ ನಡೆಯುತ್ತಿರುವಾಗ ಅವರನ್ನು ದಿಢೀರನೇ ವಧಿಸಬಹುದಾದ ಯಾವನಾದರೂ ನಿಮ್ಮಲ್ಲಿ ಇರುವನೇ? ಎಂದು ಖುರೈಶಿನ ಕೆಲವು ವ್ಯಕ್ತಿಗಳೊಡನೆ ಅಬೂಸುಫ್‌ಯಾನ್ ಕೇಳಿದರು. ಆಗ ಮರಳುಗಾಡಿನ ಒಬ್ಬ ವ್ಯಕ್ತಿ ಅಬೂಸುಫ್‌ಯಾನಿನ ಮನೆಗೆ ಬಂದು ಹೀಗೆ ಹೇಳಿದನು: ನೀವು ನನಗೆ ನೆರವಾಗುವುದಾದರೆ ನಾನು ಅವರ ಕಡೆಗೆ ಹೋಗುವೆನು ಮತ್ತು ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ)ರ ಮೇಲೆ ಅಚಾನಕ್ಕಾಗಿ ಹಲ್ಲೆ ನಡೆಸುವೆನು. ನನ್ನ ಬಳಿ ಒಂದು ಚಾಕು ಇದೆ. ಅದು ಹದ್ದಿನ ರೆಕ್ಕೆಯ ಹಾಗೆ ಇದೆ. ಅದನ್ನು ಬಳಸಿ ನಾನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಹಲ್ಲೆ ನಡೆಸುವೆನು. ಅನಂತರ ನಾನು ಯಾವುದಾದರೂ ಯಾತ್ರಾ ತಂಡದೊಂದಿಗೆ ಸೇರುವೆನು ಮತ್ತು ಓಡಿಕೊಂಡು ಆ ಸಮುದಾಯದವರಿಂದಲೂ ಮುಂದಕ್ಕೆ ಧಾವಿಸುವೆನು. ಏಕೆಂದರೆ ನಾನು ಮಾರ್ಗದ ಕುರಿತು ಬಹಳ

ನಿಪುಣನಾಗಿದ್ದೇನೆ. ಹೀಗೆ ಅಬುಸುಫ್‌ಯಾನ್ ಆತನಿಗೆ ಒಂಟೆ ಮತ್ತು ಯಾತ್ರೆಗೆ ಬೇಕಾಗಿರುವ ಸಾಮಾನುಗಳನ್ನು ಕೊಟ್ಟರು. ಆತನು ರಾತ್ರಿ ಸಮಯದಲ್ಲಿ ಹೊರಟನು ಮತ್ತು ಮದೀನಕ್ಕೆ ತಲುಪಿ ಹಝ್ರತ್ ಪೈಗಂಬರ್(ಸ)ರ ಕುರಿತು ಅನ್ವೇಷಣೆ ನಡೆಸಲು ತೊಡಗಿದನು. ಕೊನೆಗೆ ಆತನಿಗೆ ಹಝ್ರತ್ ಪೈಗಂಬರ್(ಸ)ರ ಕುರಿತು ಹೇಳಲಾಯಿತು. ಆಗ ಆತನು ತನ್ನ ಒಂಟೆಯನ್ನು ಕಟ್ಟಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದನು. ಹಝ್ರತ್ ಪೈಗಂಬರ್(ಸ) ಬನೂ ಅಬ್ದುಲ್ ಅಶ್‌ಹಲ್‌ನ ಮಸೀದಿಯಲ್ಲಿದ್ದರು. ಹಝ್ರತ್ ಪೈಗಂಬರ್(ಸ) ಆತನನ್ನು ನೋಡಿದ ಕೂಡಲೇ ಹೀಗೆ ಹೇಳಿದರು: ಖಂಡಿತವಾಗಿಯೂ ಈ ವ್ಯಕ್ತಿಗೆ ಮೋಸ ಮಾಡುವ ಉದ್ದೇಶವಿದೆ. ಆತನ ಮತ್ತು ಆತನ ಉದ್ದೇಶದ ನಡುವೆ ಅಲ್ಲಾಹನು ತಡೆಯಾಗಿ ನಿಂತಿದ್ದಾನೆ.

ಹಾಗೆ ಆತನು ಹಝ್ರತ್ ಪೈಗಂಬರ್(ಸ)ರ ಮೇಲೆ ಹಲ್ಲೆ ನಡೆಸಲು ಮುಂದಾದನು. ಆಗ ಉಸೈದ್ ಬಿನ್ ಹುಝೈರ್ ಆತನನ್ನು ಆತನ ಹೊದಿಕೆಯ ಒಳಗಿನ ಅಂಚನ್ನು ಹಿಡಿದು ಹಿಂದಕ್ಕೆ ಎಳೆದರು. ಆಗ ದಿಢೀರನೇ ಆತನ ಕೈಯಿಂದ ಚಾಕು ಕೆಳಗೆ ಬಿತ್ತು. 'ನನ್ನ ರಕ್ತ, ನನ್ನ ರಕ್ತ' ಎಂದು ಆತನು ಕಿರುಚಿದನು. ಎಂದರೆ ನನ್ನನ್ನು ಜೀವಂತವಾಗಿ ಬಿಟ್ಟುಬಿಡು ಎಂದು ಹೇಳಿಕೊಂಡನು. ಹಝ್ರತ್ ಉಸೈದ್(ರ) ಆತನ ಕುತ್ತಿಗೆಯನ್ನು ಹಿಡಿದರು ಮತ್ತು ಬಿಟ್ಟುಬಿಟ್ಟರು. 'ನೀನು ಯಾರೆಂದು ನಿಜ ಹೇಳು' ಎಂದು ಹಝ್ರತ್ ಪೈಗಂಬರ್(ಸ) ಆತನೊಡನೆ ಕೇಳಿದರು. ನಾನು ಅಭಯವನ್ನು ಯಾಚಿಸುತ್ತೇನೆ ಎಂದು ಆತನು ಹೇಳಿದನು. ಸರಿಯೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಆತನು ತನ್ನ ಕೆಲಸ ಮತ್ತು ಯಾವ ಕಾರ್ಯಕ್ಕಾಗಿ ಅಬುಸುಫ್‌ಯಾನ್ ಆತನನ್ನು ನಿಶ್ಚಯಿಸಿದ್ದರೋ ಅದರ ಬಗ್ಗೆ ತಿಳಿಸಿದನು. ಆಗ ಹಝ್ರತ್ ಪೈಗಂಬರ್(ಸ) ಆತನನ್ನು ಬಿಟ್ಟುಬಿಟ್ಟರು. ಈ ಕರುಣೆಯ ಕಾರಣದಿಂದ ಆತನು ಮುಸ್ಲಿಮನಾದನು. ಮತ್ತು ಅವನು ಹೇಳಿದನು "ಓ ಮುಹಮ್ಮದ್(ಸ)! ನನಗೆ ಜನರ ಭಯವಿರಲಿಲ್ಲ, ಆದರೆ ನಿಮ್ಮನ್ನು ನೋಡಿದಾಗ ನನ್ನ ಮನಸ್ಸು ಖಾಲಿಯಾಯಿತು ಮತ್ತು ನನ್ನ ಹೃದಯ ದುರ್ಬಲವಾಯಿತು. ನಂತರ ನಾನು ನನ್ನ ಉದ್ದೇಶವನ್ನು ಅರಿತುಕೊಂಡೆ, ಅದು ನನ್ನ ದೃಢನಿಶ್ಚಯವಾಗಿತ್ತು, ಇದನ್ನು ಅನೇಕ ಸವಾರರು ಸಾಧಿಸಲು ಪ್ರಯತ್ನಿಸಿದ್ದರು, ಆದರೆ ಯಾರೂ ಯಶಸ್ವಿಯಾಗಲಿಲ್ಲ. ನೀವು ರಕ್ಷಿಸಲ್ಪಟ್ಟಿದ್ದೀರಿ ಮತ್ತು ನೀವು ನಿಜವಾಗಿಯೂ ಸರಿಯಾದ ಹಾದಿಯಲ್ಲಿದ್ದೀರಿ ಎಂದು ನನಗೆ ತಿಳಿದಿದೆ, ಅಂದರೆ ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನು ರಕ್ಷಿಸುತ್ತಾನೆ ಮತ್ತು ಅಬುಸುಫ್ಯಾನ್ ಸೈನ್ಯವು ಸೈತಾನನ ಸೈನ್ಯವಾಗಿದೆ. ಇದನ್ನು ಆಲಿಸಿ ಹಝ್ರತ್ ಪೈಗಂಬರ್(ಸ)ರು ಮುಗುಳ್ನಗಲು ಪ್ರಾರಂಭಿಸಿದರು. ನಂತರ, ಕೆಲವು ದಿನಗಳ ಕಾಲ ಅಲ್ಲಿಯೇ ಇದ್ದ ನಂತರ, ಆ ವ್ಯಕ್ತಿ ಹಝ್ರತ್ ಪೈಗಂಬರ್(ಸ)ರ ಅನುಮತಿ ಪಡೆದು ಹೊರಟುಹೋದನು. ಅದಾದ ನಂತರ ಆ ವ್ಯಕ್ತಿಯ ಬಗ್ಗೆ ಯಾವುದೇ ಉಲ್ಲೇಖ ಕೇಳಿಬರಲಿಲ್ಲ. ನಂತರ ಇತಿಹಾಸದಲ್ಲಿ ಇದರ ಉಲ್ಲೇಖವಿಲ್ಲ.

(ಸಬ್ಲುಲ್ ಹುದಾ ಅಲ್–ರಶೀದ್, ಸಂಪುಟ 6, ಪುಟ 123, ದಾರುಲ್ ಕುತುಬ್ ಅಲ್–ಇಲ್ಮಿಯಾ, ಬೈರುತ್) (ಫರ್ಹಾಂಗ್ ಸೀರತ್, ಪುಟ 101–102, ಜವಾರ್ ಅಕಾಡೆಮಿ, ಕರಾಚಿ)

ಹಝ್ರತ್ ಪೈಗಂಬರ್(ಸ)ರು ಅಮ್ರ್ ಇಬ್ನ್ ಉಮಯ್ಯ ಮತ್ತು ಸಲಮ ಇಬ್ನ್ ಅಸ್ಲಂ ಅವರನ್ನು ಅಬುಸುಫ್ಯಾನ್ ಇಬ್ನ್ ಹರ್ಬ್ ಬಳಿಗೆ ಕಳುಹಿಸಿದರು ಮತ್ತು ಹೇಳಿದರು, "ನೀವಿಬ್ಬರೂ ಅವನನ್ನು ನಿರ್ಲಕ್ಷ್ಯದ ಸ್ಥಿತಿಯಲ್ಲಿ ಕಂಡುಕೊಂಡರೆ, ಅವನನ್ನು ವಧಿಸಿರಿ."

ಅವನು ಈ ಉದ್ದೇಶಗಳನ್ನು ಮಾಡುತ್ತಿದ್ದರೆ, ಅದು ಸರಿ. ಈ ಸಂಘರ್ಷ ಕೊನೆಗೊಳ್ಳುವಂತೆ ಅವನನ್ನು ಕೊನೆಗೊಳಿಸುವುದು ಒಂದೇ ಪರಿಹಾರ. ಇಬ್ನ್ ಹಿಶಾಮ್ ವರದಿ ಮಾಡಿದ್ದಾರೆ: ಹಝ್ರತ್ ಪೈಗಂಬರ್(ಸ)ರು ಜಬ್ಬಾರ್ ಇಬ್ನ್ ಸಖ್ರ್ ಅಲ್–ಅನ್ಸಾರಿ ಅವರನ್ನು ಅಮ್ರ್ ಇಬ್ನ್ ಉಮಯ್ಯ ಅವರೊಂದಿಗೆ ಕಳುಹಿಸಿದರು.

(ಅಸ್ಸೀರತುನ್ನಬವೀಯಾ ಲಿಇಬ್ನ್ ಹಿಶಾಮ್, ಪುಟ–885, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್) (ತಬಕಾತುಲ್ ಕುಬ್ರಾ, ಸಂಪುಟ–2, ಪುಟ–72, ದಾರುಲ್ ಕುತುಬ್ ಅಲ್–ಇಲ್ಮಿಯಾ, ಬೈರುತ್)

ಹೀಗೆ ಅವರಿಬ್ಬರೂ ಅಲ್ಲಿಂದ ಹೊರಟು ಮೆಕ್ಕಾ ಬಳಿ ತಲುಪಿದರು, ಮತ್ತು ಅವರು ತಮ್ಮ ಎರಡು ಒಂಟೆಗಳನ್ನು ಮೆಕ್ಕಾದಿಂದ ಎಂಟು ಮೈಲಿ ದೂರದಲ್ಲಿರುವ ಯಜಜ್ ಕಣಿವೆಗಳಲ್ಲಿ ಒಂದರಲ್ಲಿ ಮರೆಮಾಡಿದರು. ನಂತರ ಅವರು ರಾತ್ರಿಯಲ್ಲಿ ಮೆಕ್ಕಾವನ್ನು ಪ್ರವೇಶಿಸಿದರು. ಜಬ್ಬಾರ್ ಅಥವಾ ಸಲಮಾ ಅಮ್ರ್ ಗೆ, ನಾವು ಬೈತುಲ್ಲಾಹ್‌ವನ್ನು ತವಾಫ್ ಮಾಡಿ ಎರಡು ರಕಅತ್ ಗಳನ್ನು ಪ್ರಾರ್ಥಿಸಿದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಹೇಳಿದರು. ಅಮ್ರೊ ಹೇಳಿದರು: ಈ ಜನರು ರಾತ್ರಿ ಊಟ ಮಾಡಿದ ನಂತರ ತಮ್ಮ ಅಂಗಳದಲ್ಲಿ ಕುಳಿತುಕೊಳ್ಳುತ್ತಾರೆ. ಅವರು ನನ್ನನ್ನು ನೋಡಿದರೆ, ನನ್ನನ್ನು ಗುರುತಿಸುತ್ತಾರೆ. ನಾನು ಮೆಕ್ಕಾದಲ್ಲಿ ಬಿಳಿ ಮತ್ತು ಕಪ್ಪು ಕುದುರೆಗಳಿಗಿಂತ ಹೆಚ್ಚು ಪ್ರಸಿದ್ಧನಾಗಿದ್ದೇನೆ, ಅಂದರೆ ಅನೇಕ ಜನರು ನನ್ನನ್ನು ತಿಳಿದಿದ್ದಾರೆ. ಅವರಿಗೆ ನನ್ನ ಪರಿಚಯವಿದೆ. ಅಮ್ರ್ ಅವರ ಜೊತೆಗಾರ, "ಖಂಡಿತ ಇಲ್ಲ" ಎಂದರು. ಇನ್‌ಶಾಅಲ್ಲಾಹ್, ನಾವು ಹೋಗುತ್ತೇವೆ. ಅಮ್ರೊ ಹೇಳುತ್ತಾರೆ: ಅವನು ನನ್ನ ಮಾತನ್ನು ಕೇಳಲು ನಿರಾಕರಿಸಿದನು, ಆದ್ದರಿಂದ ನಾವು ಬೈತುಲ್ಲಾಹ್‌ದ ಸುತ್ತಲೂ ತವಾಫ್ ಮಾಡಿ ನಮಾಝ್ ನಿರ್ವಹಿಸಿದೆವು. ನಂತರ ಅವರು ಹೇಳುತ್ತಾರೆ, "ನಾವು ಅಬೂಸುಫ್ಯಾನ್ ಅನ್ನು ಉದ್ದೇಶಿಸಿ ಹೊರಟೆವು." ಅವರು ಬಂದ ಉದ್ದೇಶವನ್ನು ಪೂರೈಸಲು ಹೊರಟರು. ಅವರು ಹೇಳುತ್ತಾರೆ, "ಅಲ್ಲಾಹನ ಆಣೆ! ನಾವು ಮೆಕ್ಕಾದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಇದ್ದಕ್ಕಿದ್ದಂತೆ ಮೆಕ್ಕಾದ ಒಬ್ಬ ವ್ಯಕ್ತಿ ನನ್ನನ್ನು ನೋಡಿ ಗುರುತಿಸಿದನು." ಇಬ್ನ್ ಸಅದ್(ರ) ರವರು ಮುಆವಿಯಾ ಬಿನ್ ಅಬಿ ಸುಫ್ಯಾನ್ ಅವರನ್ನು ಗುರುತಿಸಿದರು ಎಂದು ವರದಿ ಮಾಡಿದ್ದಾರೆ, ಆದ್ದರಿಂದ ಮುಆವಿಯಾ ಹೇಳಿದರು, "ಅಲ್ಲಾಹನ ಆಣೆ, ಅಮ್ರ್ ಬಿನ್ ಉಮಯ್ಯ ಯಾವುದೋ ದುಷ್ಟ ಉದ್ದೇಶಕ್ಕಾಗಿ ಬಂದಿದ್ದಾನೆ." ಅವನು ಖುರೈಷಿಗಳಿಗೆ ಹೇಳಿದನು. ಆದ್ದರಿಂದ ಅವರು ಅಮ್ರ್ ಬಗ್ಗೆ ಭಯಪಟ್ಟರು. ಖುರೈಷಿಗಳು ವಿಷಯ ತಿಳಿದಾಗ, ಅವರು ಭಯಭೀತರಾಗಿ ಹುಡುಕಲು ಹೊರಟರು. "ನಾನು ನನ್ನ ಜೊತೆಗಾರನಿಗೆ ಬೇಗ ಓಡಿಹೋಗಲು ಹೇಳಿದೆ" ಎಂದು ಅಮ್ರ್ ಹೇಳುತ್ತಾರೆ. ಹಾಗಾಗಿ ನಾವು ಅಲ್ಲಿಂದ ಹೊರಟು ವೇಗವಾಗಿ ಓಡಲು ಪ್ರಾರಂಭಿಸಿದೆವು, ನಾವು ಪರ್ವತವನ್ನು ಏರುವವರೆಗೂ ಅವರು ನಮ್ಮನ್ನು ಹುಡುಕಿಕೊಂಡು ಬಂದರು ಮತ್ತು ನಾವು ಪರ್ವತವನ್ನು ಹತ್ತಿದೆವು. ಅವರು ನಮ್ಮ ಬಗ್ಗೆ ನಿರಾಶೆಗೊಂಡರು, ಆದ್ದರಿಂದ ನಾವು ಹಿಂತಿರುಗಿ ಪರ್ವತದಲ್ಲಿರುವ ಒಂದು ಗುಹೆಯನ್ನು ಪ್ರವೇಶಿಸಿದೆವು. ನಾವು ಅದರಲ್ಲಿ ರಾತ್ರಿ ಕಳೆದೆವು ಮತ್ತು ಕಲ್ಲುಗಳನ್ನು ತೆಗೆದುಕೊಂಡು ನಮ್ಮ ಸುತ್ತಲೂ ಜೋಡಿಸಿದೆವು. ಬೆಳಿಗ್ಗೆ ಯಾದಾಗ, ಖುರೈಷಿಗಳ ಒಬ್ಬ ವ್ಯಕ್ತಿ ನಮ್ಮ ಬಳಿಗೆ ಬಂದನು. ಅಲ್ಲಿ ನಾನು ಖುರೈಷಿ ಜನಾಂಗದ ಒಬ್ಬ ವ್ಯಕ್ತಿ ನಡೆದುಕೊಂಡು ಹೋಗುವುದನ್ನು ನೋಡಿದೆ. ಇಬ್ನ್ ಸಅದ್ ಅವರ ಪ್ರಕಾರ, ಅವರು ಉಬೈದುಲ್ಲಾ ಬಿನ್ ಮಾಲಿಕ್ ಬಿನ್ ಉಬೈದುಲ್ಲಾ ತೈಮಿಯಾ. ಆದರೆ ಇಬ್ನ್ ಇಸ್‌ಹಾಕ್ ಪ್ರಕಾರ, ಅವರು ಉಸ್ಮಾನ್ ಇಬ್ನ್ ಮಲಿಕ್ ಅಥವಾ ಅಬ್ದುಲ್ಲಾ. ಆದಾಗ್ಯೂ, ಅವರು ಹೇಳುತ್ತಾರೆ: ಅವನು ತನ್ನ ಕುದುರೆಯನ್ನು ಓಡಿಸುತ್ತಿದ್ದನು. ಅವನು ನಾವಿದ್ದ ಗುಹೆಯ ಸುತ್ತಲೂ ಸುತ್ತಾಡುತ್ತಿದ್ದನು ಮತ್ತು ನಾವು ಗುಹೆಯಲ್ಲಿದ್ದೆವು. ಹಾಗಾಗಿ ನಾನು, "ಇವನು ನಮ್ಮನ್ನು ನೋಡಿದರೆ, ಕಿರುಚಾಡುತ್ತಾನೆ ಮತ್ತು ನಮ್ಮನ್ನು ಹಿಡಿದು ಕೊಲ್ಲಲಾಗುತ್ತದೆ, ಅಂದರೆ ಅವನು ಸತ್ಯನಿಷೇಧಿಗಳನ್ನು ಕರೆಯುತ್ತಾನೆ. ಅವರು ಹೇಳುತ್ತಾರೆ: ನಾನು ಅಬುಸುಫ್ಯಾನ್‌ಗಾಗಿ ಸಿದ್ಧಪಡಿಸಿದ್ದ ಕಠಾರಿ ನನ್ನಲ್ಲಿತ್ತು. ನಾನು ಕೈಚಾಚಿ ಅವನ ಎದೆಗೆ ಇರಿದೆ. ಅವನು ಕೂಗಿದಾಗ, ಮೆಕ್ಕಾದ ಜನರು ಅವನ ಧ್ವನಿಯನ್ನು ಕೇಳಿದರು. ನಾನು ಹಿಂತಿರುಗಿ ಗುಹೆಯನ್ನು ಪ್ರವೇಶಿಸಿದೆ ಮತ್ತು ಜನರು ಅವನ ಬಳಿಗೆ ಓಡಿ ಬಂದರು ಮತ್ತು ಅವನು ತನ್ನ ಜೀವನದ ಕೊನೆಯ ಕ್ಷಣಗಳಲ್ಲಿದ್ದನು. ಆಗ ಅವರು ನಿನ್ನನ್ನು ಕೊಂದವರು ಯಾರು? ಎಂದು ಕೇಳಿದರು, ಅದಕ್ಕೆ ಅವನು, "ಅಮ್ರ್ ಬಿನ್ ಉಮಯ್ಯ" ಎಂದನು. ನಂತರ ಸಾವು ಅವನನ್ನು ಆವರಿಸಿತು ಮತ್ತು ಅವನು ಆ ಸ್ಥಳದಲ್ಲೇ ಸಾವನ್ನಪ್ಪಿದನು ಮತ್ತು ನಾವು ಎಲ್ಲಿದ್ದೇವೆಂದು ಅವರಿಗೆ ತಿಳಿಸಲು ಸಾಧ್ಯವಾಗಲಿಲ್ಲ.

ಒಂದು ವರದಿಯ ಪ್ರಕಾರ, ಅವರು ಅವನನ್ನು ಕಂಡುಕೊಂಡಾಗ, ಮೆಕ್ಕಾದ ಜನರಿಗೆ ನಮ್ಮ ಸ್ಥಳವನ್ನು ಹೇಳುವಷ್ಟು ಶಕ್ತಿ ಅವನಲ್ಲಿರಲಿಲ್ಲ. ಅಮ್ರೊ ಬಿನ್ ಉಮಯ್ಯ ಹೇಳುತ್ತಾರೆ: ನಾನು ನನ್ನ ಒಡನಾಡಿಗೆ ಹೇಳಿದೆ, "ನೀವು ನಿಮ್ಮ ಜೀವವನ್ನು ಉಳಿಸಿಕೊಂಡು ಓಡಿಹೋಗಿ. ಈಗ ನೀವು ನಿಮ್ಮ ಒಂಟೆಯ ಬಳಿಗೆ ಹೋಗಿ, ಅದರ ಮೇಲೆ ಕುಳಿತು ಹೊರಟು ಹೋಗಿ. ಆದ್ದರಿಂದ ಅವರು ಹೊರಟುಹೋದರು. ಅಮ್ರ್ ಬಿನ್ ಉಮಯ್ಯ ಹೇಳುತ್ತಾರೆ: ನಂತರ ನಾನು **ಝುಜ್‌ನಾನ್**ಗೆ ತಲುಪಿದೆ. **ಝುಜ್‌ನಾನ್** ಎಂಬುದು ಮೆಕ್ಕಾದಿಂದ ಒಂದು **ಬರೀದ್** ಅಥವಾ ಹನ್ನೆರಡು ಮೈಲು ದೂರದಲ್ಲಿರುವ ಒಂದು ಪರ್ವತವಾಗಿತ್ತು. ನಂತರ ನಾನು ಒಂದು ಪರ್ವತದಲ್ಲಿ ಆಶ್ರಯ ಪಡೆದು ಒಂದು ಗುಹೆಯನ್ನು ಪ್ರವೇಶಿಸಿದೆ ಎಂದು ಹೇಳಲಾಗುತ್ತದೆ. ಅಮ್ರ್ ಹೇಳುತ್ತಾರೆ: ನಂತರ ನಾನು **ಅರ್ಜ್** ತಲುಪುವವರೆಗೆ ಅಲ್ಲಿಂದ ಹೊರಟೆ. **ಅರ್ಜ್** ಮೆಕ್ಕಾ ಮತ್ತು ಮದೀನಾ ನಡುವಿನ ಒಂದು ಕಮರಿಯಾಗಿದ್ದು, ಅಲ್ಲಿ ಕಾರವಾನ್‌ಗಳು ನಿಲ್ಲುತ್ತಿದ್ದವು. ನಂತರ ನಾನು **ನಖೀ** ತಲುಪುವವರೆಗೆ ಕುದುರೆಯ ಮೇಲೆ ಸವಾರಿ ಮಾಡಿದೆ. ನಖೀ ಮದೀನಾದಿಂದ ಎರಡು ರಾತ್ರಿಗಳ ಪ್ರಯಾಣದ ದೂರದಲ್ಲಿರುವ ಒಂದು ಸ್ಥಳವಿತ್ತು. ಈ ದೂರವನ್ನು ಇಬ್ನ್ ಹಿಶಾಮ್ ಅವರ ಜೀವನ ಚರಿತ್ರೆಯಲ್ಲಿ ಬರೆಯಲಾಗಿದೆ. ಹೀಗೆ, ಖುರೈಷಿಗಳ

ಅವಿಶ್ವಾಸಿಗಳಿಂದ ಇಬ್ಬರು ಪುರುಷರು ಮದೀನಾದ ಕಡೆಗೆ ಬರುತ್ತಿದ್ದರು. ಅವರನ್ನು ಖುರೈಷಿಗಳು ಪರಿಸ್ಥಿತಿ ಮತ್ತು ಘಟನೆಗಳನ್ನು ವೀಕ್ಷಿಸಲು ಮತ್ತು ತನಿಖೆ ಮಾಡಲು ಗೂಢಚಾರರಾಗಿ ಕಳುಹಿಸಿದ್ದರು. ನಾನು ಅವರಿಬ್ಬರನ್ನೂ ಸೆರೆಯಾಳಾಗಿ ತೆಗೆದುಕೊಳ್ಳಲು ನನಗೆ ಒಪ್ಪಿಸುವಂತೆ ಹೇಳಿದೆ. ಇಬ್ಬರೂ ನಿರಾಕರಿಸಿದರು. ನಾನು ಅವರಲ್ಲಿ ಒಬ್ಬನನ್ನು ಬಾಣದಿಂದ ಕೊಂದೆ, ಮತ್ತು ಇನ್ನೊಬ್ಬನು ತಾನೇ ಶರಣಾದನು. ನಾನು ಅವನನ್ನು ಕಟ್ಟಿಹಾಕಿ ಮದೀನಾಕ್ಕೆ ಕರೆತಂದೆ. ಹಸ್ತಾಂತರವು ಹಾಗೆ ಆಗಲಿಲ್ಲ, ಬದಲಿಗೆ ಇಬ್ಬರೂ ಅಲ್ಲಿ ಯುದ್ಧವಾಡಿದರು ಮತ್ತು ಬಿಲ್ಲುಗಾರಿಕೆ ವಿನಿಮಯವಾಯಿತು. ಆದಾಗ್ಯೂ, ಅಮ್ರ್ ಬಿನ್ ಉಮಯ್ಯ ಹಝ್ರತ್ ಪೈಗಂಬರ್(ಸ) ಅವರಿಗೆ ತನ್ನ ಸನ್ನಿವೇಶಗಳು ಮತ್ತು ಘಟನೆಗಳ ಬಗ್ಗೆ ಹೇಳಲು ಪ್ರಾರಂಭಿಸಿದರು, ಮತ್ತು ಹಝ್ರತ್ ಪೈಗಂಬರ್(ಸ)ರು ನಗುತ್ತಿದ್ದರು. ನಂತರ ಹಝ್ರತ್ ಪೈಗಂಬರ್(ಸ) ಅಮ್ರ್ ಇಬ್ನ್ ಉಮಯ್ಯರವರ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸಿದರು.

(ಸಬ್ಲ್ ಅಲ್-ಹುದಾ, ಸಂಪುಟ 6, ಪುಟಗಳು 123-125, ದಾರುಲ್ ಕುತುಬ್ ಇಲ್ಮಿಯಾ, ಬೈರುತ್) (ಫರ್ಹಾಂಗ್ ಅಲ್-ಸೀರತ್, ಪುಟಗಳು 319, 198, 56, ಝೋವಾರ್ ಅಕಾಡೆಮಿ ಕರಾಚಿ) (ಜರ್ಕಾನಿ, ಸಂಪುಟ 3, ಪುಟ 228, ದಾರುಲ್ ಕುತುಬ್ ಇಲ್ಮಿಯಾ, ಬೈರುತ್) (ಅಸ್ಸೀರತುನ್ನಬವೀಯಾ ಲಿಇಬ್ನ್ ಹಿಶಾಮ್, ಪುಟ 886, ಅಡಿಟಿಪ್ಪಣಿ, ದಾರುಲ್ ಕುತುಬ್ ಇಲ್ಮಿಯಾ, ಬೈರುತ್)

ಈ ಕಾರ್ಯಾಚರಣೆಯ ವರ್ಷಕ್ಕೆ ಸಂಬಂಧಿಸಿದಂತೆ ಕೆಲವು ವಿಭಿನ್ನ ಸಂಪ್ರದಾಯಗಳಿವೆ. ಇಬ್ನ್ ಹಿಶಾಮ್, ಇಬ್ನ್ ಕಸೀರ್ ಮತ್ತು ತಬರಿ ಮುಂತಾದವರು ಹಿಜ್ರಿ 4 ರಲ್ಲಿ ನಡೆದಿದೆ ಎಂದು ಹೇಳುತ್ತಾ, ಹಝ್ರತ್ ಖುಬೈಬ್ ಬಿನ್ ಆದಿಯವರ ದೇಹವನ್ನು ಮರದಿಂದ ತೆಗೆದ ಬಗ್ಗೆ ಉಲ್ಲೇಖಿಸಿದ್ದಾರೆ. ರಜ್‌ಈ ಘಟನೆಯಲ್ಲಿ ಹಝ್ರತ್ ಖುಬೈಬ್(ರ) ಅವರನ್ನು ಸೆರೆಹಿಡಿದು ಮೆಕ್ಕಾದಲ್ಲಿ ಮಾರಾಟ ಮಾಡಲಾಯಿತು, ಮತ್ತು ಖುರೈಷಿಗಳು ಅವರನ್ನು ಮರಕ್ಕೆ ಕಟ್ಟಿ ಹುತಾತ್ಮಗೊಳಿಸಿದರು. ಆದಾಗ್ಯೂ, ಅಮ್ರ್ ಇಬ್ನ್ ಉಮಯ್ಯ ಅವರ ಕಾರ್ಯಾಚರಣೆಯ ಸಂದರ್ಭದಲ್ಲಿ ಇಬ್ನ್ ಸಅದ್ ಮರದಿಂದ ದೇಹವನ್ನು ತೆಗೆಯುವ ಬಗ್ಗೆ ಉಲ್ಲೇಖಿಸಲಿಲ್ಲ, ಮತ್ತು ಇಬ್ನ್ ಸಅದ್ ಅವರ ವರದಿಯು ಈ ವಿಷಯದಲ್ಲಿ ಉತ್ತಮವಾಗಿ ಕಾಣುತ್ತದೆ ಏಕೆಂದರೆ ಹಝ್ರತ್ ಖುಬೈಬ್(ರ.ಅ) ಅವರ ದೇಹವನ್ನು ತೆಗೆದುಹಾಕಲು ಮತ್ತೊಂದು ಪಕ್ಷದ ಉಲ್ಲೇಖವು ಪುಸ್ತಕಗಳಲ್ಲಿ ಪ್ರತ್ಯೇಕವಾಗಿ ಕಂಡುಬರುತ್ತದೆ. ಜರ್ಕಾನಿ ಕೂಡ ಇದೇ ನಿಲುವನ್ನು ತೆಗೆದುಕೊಂಡಿದ್ದಾರೆ ಮತ್ತು ಅಮ್ರ್ ಇಬ್ನ್ ಉಮಯ್ಯ ಅವರ ಕಾರ್ಯಾಚರಣೆಯ ಕೊನೆಯಲ್ಲಿ ಹಝ್ರತ್ ಪೈಗಂಬರ್(ಸ) ಅವರು ಖುಬೈಬ್ ಇಬ್ನ್ ಆದಿ(ರ) ಅವರ ದೇಹವನ್ನು ಕೊಂಡೊಯ್ಯಲು ಹಝ್ರತ್ ಝುಬೈರ್ ಮತ್ತು ಮಿಖ್ದಾದ್ ಅವರನ್ನು ಕಳುಹಿಸಿದರು ಎಂದು ಬರೆಯುತ್ತಾರೆ.

(ಝುರ್ಕಾನಿ, ಸಂಪುಟ 3, ಪುಟ 169, ದಾರುಲ್ ಕುತುಬ್ ಇಲ್ಮಿಯಾ, ಬೈರುತ್)

ಈ ವಿಷಯದಲ್ಲಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ.ಅ) ಅವರು ತಮ್ಮ ಸೀರತ್ ಖಾತಮನ್ನಬಿಯೀನ್(ಸ) ನಲ್ಲಿ ಬರೆದಿದ್ದಾರೆ, ಈ ಕಾರ್ಯಾಚರಣೆಯಲ್ಲಿ ಅಮ್ರ್ ಬಿನ್ ಉಮಯ್ಯ ಖುಬೈಬ್ ಬಿನ್ ಆದಿಯವರ ದೇಹವನ್ನು ಮರದಿಂದ ಕೆಳಗಿಳಿಸಿದ ಘಟನೆಯನ್ನು ಉಲ್ಲೇಖಿಸಿಲ್ಲ. ನೀವು ಅದನ್ನು ಈ ರೀತಿ ವಿವರಿಸಿದ್ದೀರಿ: "ಅಹ್ಝಾಬ್ ಯುದ್ಧದ ಅವಮಾನಕರ ವೈಫಲ್ಯದ ನೆನಪು ಮೆಕ್ಕಾದ ಖುರೈಶಿಗಳ ದೇಹಗಳಿಗೆ ಬೆಂಕಿ ಹಚ್ಚಿತ್ತು, ಮತ್ತು ಸ್ವಾಭಾವಿಕವಾಗಿ ಈ ಹೃದಯದ ಬೆಂಕಿಯನ್ನು ಹೆಚ್ಚಾಗಿ ಅನುಭವಿಸಿದ್ದು ಮೆಕ್ಕಾದ ಗವರ್ನರ್ ಆಗಿದ್ದ ಮತ್ತು ಅಹ್ಝಾಬ್ ಯುದ್ಧದಲ್ಲಿ ವಿಶೇಷವಾಗಿ ಅವಮಾನಕರ ಸೋಲನ್ನು ಅನುಭವಿಸಿದ ಅಬುಸುಫ್ಯಾನ್‌ನಲ್ಲಿತ್ತು. ಸ್ವಲ್ಪ ಸಮಯದವರೆಗೆ, ಅಬುಸುಫ್ಯಾನ್ ಈ ಬೆಂಕಿಯಲ್ಲಿ ತನ್ನೊಳಗೆ ಉರಿಯುತ್ತಲೇ ಇದ್ದನು, ಆದರೆ ಅಂತಿಮವಾಗಿ ವಿಷಯ ಅಸಹನೀಯವಾಯಿತು ಮತ್ತು ಈ ಬೆಂಕಿಯ ಗುಪ್ತ ಜ್ವಾಲೆಗಳು ಹೊರಬರಲು ಪ್ರಾರಂಭಿಸಿದವು. ಸ್ವಾಭಾವಿಕವಾಗಿ, ಅವಿಶ್ವಾಸಿಗಳ ದೊಡ್ಡ ದ್ವೇಷ, ವಾಸ್ತವವಾಗಿ, ಅವರ ನಿಜವಾದ ದ್ವೇಷವು ಹಝ್ರತ್ ಪೈಗಂಬರ್(ಸ) ರವರೊಂದಿಗೆ ಇತ್ತು. ಆದ್ದರಿಂದ, ಅಬುಸುಫ್ಯಾನ್ ಈಗ ಯೋಚಿಸಿದನು, ಬಹಿರಂಗ ತಂತ್ರಗಳು ಮತ್ತು ಕುತಂತ್ರಗಳು ಯಾವುದೇ ಫಲಿತಾಂಶವನ್ನು ನೀಡಿಲ್ಲವಾದ್ದರಿಂದ, ಯಾವುದಾದರೂ ರಹಸ್ಯ ಯೋಜನೆಯ ಮೂಲಕ ಮುಹಮ್ಮದ್(ಸ) ರನ್ನು ಏಕೆ ವಧಿಸಬಾರದು? ಅವನಿಗೆ ತಿಳಿದಿತ್ತು, ಹಝ್ರತ್ ಪೈಗಂಬರ್(ಸ) ರವರ ಸುತ್ತ ವಿಶೇಷ ಕಾವಲುಗಾರರು ಯಾರೂ ಇರಲಿಲ್ಲ, ಆದರೆ ಕೆಲವೊಮ್ಮೆ ಅವರು ಸಂಪೂರ್ಣವಾಗಿ ಅಸುರಕ್ಷಿತವಾಗಿ ತಿರುಗಾಡುತ್ತಿರುತ್ತಾರೆ. ಮತ್ತು ನಗರದ ಬೀದಿಗಳಲ್ಲಿ ನಡೆಯುತ್ತಿರುತ್ತಾರೆ. ಅವರು(ಸ) ದಿನಕ್ಕೆ ಕನಿಷ್ಠ ಐದು ಬಾರಿ ನಮಾಝ್‌ಗಾಗಿ ಮಸೀದಿಗೆ ಹಾಜರಾಗುತ್ತಾರೆ ಮತ್ತು ಮುಕ್ತವಾಗಿ ಪ್ರಯಾಣಿಸುತ್ತಾರೆ. ಹೀಗೆ, ಬಾಡಿಗೆ ಕೊಲೆಗಾರನಿಗೆ ಇದಕ್ಕಿಂತ ಉತ್ತಮ ಅವಕಾಶ ಇನ್ನೊಂದಿಲ್ಲ? ಈ ಆಲೋಚನೆಯಿಂದಾಗಿ ಅಬುಸುಫ್ಯಾನ್ ಹಝ್ರತ್ ಪೈಗಂಬರ್(ಸ) ಅವರನ್ನು ವಧಿಸಲು ಈಗಾಗಲೇ ಒಂದು ಯೋಜನೆಯನ್ನು ರೂಪಿಸಲು ಪ್ರಾರಂಭಿಸಿದನು.

ಈ ಉದ್ದೇಶದ ಬಗ್ಗೆ ಅವನು ದೃಢನಿಶ್ಚಯ ಮಾಡಿದಾಗ, ಒಂದು ದಿನ ಅವನು ಅವಕಾಶವನ್ನು ಪಡೆದುಕೊಂಡು ತಮ್ಮ ಕೆಲವು ಸಹ ಖುರೈಶ್ ಯುವಕರನ್ನು ಉದ್ದೇಶಿಸಿ, "ಮದೀನಾಗೆ ಹೋಗಿ ಮುಹಮ್ಮದ್(ಸ) ರವರ ಕೆಲಸವನ್ನು ರಹಸ್ಯವಾಗಿ ಪೂರ್ಣಗೊಳಿಸಬಲ್ಲ ಯುವಕ ನಿಮ್ಮಲ್ಲಿ ಇಲ್ಲವೇ?" ಎಂದು ಕೇಳಿದನು. "ಮುಹಮ್ಮದ್(ಸ) ಮದೀನಾದ ಬೀದಿಗಳಲ್ಲಿ ಬಹಿರಂಗವಾಗಿ ನಡೆಯುತ್ತಾರೆಂದು ನಿಮಗೆ ತಿಳಿದಿದೆ." ಈ ಯುವಕರು ಈ ವಿಚಾರವನ್ನು ಕೇಳಿ ಸಿದ್ಧರಾದರು. ಅವರಿಗೆ ಅದು ಇಷ್ಟವಾಯಿತು. "ಸ್ವಲ್ಪ ಸಮಯದ ನಂತರ, ಒಬ್ಬ ಅನಾಗರೀಕ ಯುವಕ ಅಬುಸುಫ್ಯಾನ್ ಬಳಿಗೆ ಬಂದು, ನಾನು ನಿಮ್ಮ ಪ್ರಸ್ತಾಪವನ್ನು ಕೇಳಿದ್ದೇನೆ ಮತ್ತು ನಾನು ಅದಕ್ಕೆ ಸಿದ್ಧನಿದ್ದೇನೆ ಎಂದು ಹೇಳಿದನು." ಘಟನೆಯನ್ನು ಈ ಹಿಂದೆ ವಿವರಿಸಿದಂತೆ. ಈ ಘಟನೆಯನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ.ಅ) ಕೂಡ ನಿರೂಪಿಸಿದ್ದಾರೆ. "ನಾನು ಬಲವಾದ ಹೃದಯವಂತ ಮತ್ತು ದೃಢನಿಶ್ಚಯದ ವ್ಯಕ್ತಿ, ನನ್ನ ಹಿಡಿತ ಬಿಗಿಯಾಗಿರುತ್ತದೆ ಮತ್ತು ನನ್ನ ದಾಳಿಗಳು ವೇಗವಾಗಿರುತ್ತವೆ" ಎಂದೂ ಅವನು ಹೇಳಿದನು. ಈ ಕಾರ್ಯಕ್ಕಾಗಿ ನೀವು ನನ್ನನ್ನು ನೇಮಿಸುವ ಮೂಲಕ ನನಗೆ ಸಹಾಯ ಮಾಡಿದರೆ, ನಾನು ಮುಹಮ್ಮದ್(ಸ) ಅವರನ್ನು ವಧಿಸಲು ಸಿದ್ಧನಿದ್ದೇನೆ, ಮತ್ತು ನನ್ನ ಬಳಿ ಬೇಟೆಯಾಡುವ ರಣಹದ್ದಿನ ರೆಕ್ಕೆಗಳಂತೆ ಅಡಗಿರುವ ಕಠಾರಿ ಇದೆ. ಹಾಗಾಗಿ ನಾನು ಮುಹಮ್ಮದ್(ಸ) ರ ಮೇಲೆ ದಾಳಿ ಮಾಡಿ ನಂತರ ಓಡಿಹೋಗಿ ಒಂದು ಕಾರವಾನ್ ಸೇರುತ್ತೇನೆ ಮತ್ತು ಮುಸ್ಲಿಮರು ನನ್ನನ್ನು ಹಿಡಿಯಲು ಸಾಧ್ಯವಾಗುವುದಿಲ್ಲ. 'ಈ ಹಿಂದೆ ವಿವರಿಸಿದಂತೆ ಅದೇ ಘಟನೆ. ಇದನ್ನೇ ಅವನು ವಿವರಿಸಿದ್ದಾನೆ ಮತ್ತು ನೀವು(ರ) ಅದನ್ನು ಪುನಃ ಬರೆದಿದ್ದಾರೆ. ನಂತರ ಅವರು ಹೇಳಿದರು, "ಮತ್ತು ನಾನು ಮದೀನಾಗೆ ಹೋಗುವ ಮಾರ್ಗದ ಬಗ್ಗೆಯೂ ಬಹಳ ಜ್ಞಾನವುಳ್ಳವನಾಗಿದ್ದೇನೆ." ಅಬುಸುಫ್ಯಾನ್ ಹೇಳಿದರು. "ನೀನೇ ನಮಗೆ ಬೇಕಾದ ವ್ಯಕ್ತಿ." ಅದಾದ ನಂತರ, ಅಬುಸುಫ್ಯಾನ್ ಅವನನ್ನು ಕಳುಹಿಸಿಕೊಟ್ಟನು, ಅವನಿಗೆ ವೇಗವಾಗಿ ಓಡುವ ಒಂಟೆ, ದಾತಿಯವೆಚ್ಚ ಇತ್ಯಾದಿಗಳನ್ನು ನೀಡಿ, ಈ ರಹಸ್ಯವನ್ನು ಯಾರಿಗೂ ಬಹಿರಂಗಪಡಿಸಬಾರದು ಎಂದು ಒತ್ತಾಯಿಸಿದನು.

ಮೆಕ್ಕಾದಿಂದ ಹೊರಟ ನಂತರ, ಈ ವ್ಯಕ್ತಿ ಹಗಲಿನಲ್ಲಿ ಅಡಗಿಕೊಳ್ಳುತ್ತಿದ್ದ. ಮತ್ತು ರಾತ್ರಿಯಿಡೀ ಮದೀನಾಗೆ ಹೊರಟು ಆರನೇ ದಿನ ಮದೀನಾಗೆ ತಲುಪಿದನು. ಹಝ್ರತ್ ಪೈಗಂಬರ್(ಸ) ರವರ ವಿಳಾಸವನ್ನು ಕೋರಿ, ಅವನು ನೇರವಾಗಿ ಬನಿ ಅಬ್ದುಲ್ ಅಶ್ಹಲ್ ಗೋತ್ರದ ಮಸೀದಿಗೆ ತಲುಪಿದನು. ಆ ಸಮಯದಲ್ಲಿ ಅವರು(ಸ) ಅಲ್ಲಿಯೇ ಇದ್ದರು. ಆ ದಿನಗಳಲ್ಲಿ ಮದೀನಾಗೆ ಹೊಸ ಜನರು ನಿರಂತರವಾಗಿ ಬರುತ್ತಿದ್ದರಿಂದ, ಯಾವುದೇ ಮುಸ್ಲಿಮರು ಅದರ ಬಗ್ಗೆ ಏನನ್ನೂ ಅನುಮಾನಿಸಲಿಲ್ಲ. ಆದರೆ ಹಝ್ರತ್ ಪೈಗಂಬರ್(ಸ) ಅವಟಣ ತಮ್ಮ ಕಡೆಗೆ ಬರುತ್ತಿರುವುದನ್ನು ನೋಡಿದ ತಕ್ಷಣ, "ಈ ಮನುಷ್ಯ ದುಷ್ಟ ಉದ್ದೇಶದಿಂದ ಬಂದಿದ್ದಾನೆ" ಎಂದು ಹೇಳಿದರು. ಈ ಮಾತುಗಳನ್ನು ಕೇಳಿ ಅವನು ಇನ್ನೂ ವೇಗವಾಗಿ ಹಝ್ರತ್ ಪೈಗಂಬರ್(ಸ) ರವರ ಕಡೆಗೆ ಧಾವಿಸಿದನು, ಆದರೆ ಅನ್ಸಾರ್ ನಾಯಕ ಉಸೈದ್ ಬಿನ್ ಹುದೈರ್ ತಕ್ಷಣ ಹಾರಿ ಅವನನ್ನು ತಬ್ಬಿಕೊಂಡನು. ಈ ಸಂಘರ್ಷದ ಸಂದರ್ಭದಲ್ಲಿ ಅವರ ಕೈ ಅವನ ಗುಪ್ತ ಕಠಾರಿಯ ಮೇಲೆ ಬಿದ್ದಿತು, ಅದಕ್ಕೆ ಅವನು ಗಾಬರಿಗೊಂಡು "ನನ್ನ ರಕ್ತ, ನನ್ನ ರಕ್ತ" ಎಂದು ಕೂಗಿದನು. ಇಲ್ಲಿ ಅವನು ಮೇಲಂಗಿಯನ್ನು ಎಳೆದಿದ್ದಲ್ಲದೆ, ಹಝ್ರತ್ ಪೈಗಂಬರ್(ಸ) ಅವರನ್ನು ಹಿಡಿಯಲು ಪ್ರಯತ್ನಿಸಿದನು, ಇದರಿಂದಾಗಿ ಅವನ ಕಠಾರಿ ಅವನ ಕೈಯಿಂದ ಜಾರಿತು ಎಂದು ಹೆಚ್ಚು ವಿವರವಾಗಿ ಬರೆದಿದ್ದಾರೆ. ಆದರೆ, ಅವನು ಮತ್ತೆ "ನನ್ನನ್ನು ಕ್ಷಮಿಸಿ" ಎಂದು ಧ್ವನಿ ಎತ್ತಿದನು. "ಅವನು ನಿಗ್ರಹಿಸಲ್ಪಟ್ಟಾಗ, ಹಝ್ರತ್ ಪೈಗಂಬರ್(ಸ) ಅವನನ್ನು ಕೇಳಿದರು, "ನನಗೆ ಸತ್ಯ ಹೇಳು, ನೀನು ಯಾರು ಮತ್ತು ಯಾವ ಉದ್ದೇಶಕ್ಕಾಗಿ ಬಂದಿರುವೆ?" ಅವನು ಹೇಳಿದನು, "ನನ್ನ ಪ್ರಾಣ ಉಳಿಸಿದರೆ, ನಾನು ನಿಮಗೆ ಹೇಳುತ್ತೇನೆ." ನಂತರ ಮೊದಲೆ ಹೇಳಿದಂತೆ ಅವನು ಇಡೀ ಕಥೆಯನ್ನು ಹೇಳಿದನು ಮತ್ತು ಹಝ್ರತ್ ಪೈಗಂಬರ್(ಸ) ಅವನಿಗೆ ಹೇಳಿದರು, "ಸರಿ, ನಿನ್ನನ್ನು ಕ್ಷಮಿಸಲಾಗುವುದು." ಅವನು ಹಝ್ರತ್ ಪೈಗಂಬರ್(ಸ)ರವರಿಗೆ ಹೇಳಿದನು "... ಮತ್ತು ಅಬುಸುಫ್ಯಾನ್ ಅವನಿಗೆ ಇಂತಿಂತಹ ಪ್ರತಿಫಲವನ್ನು ವಾಗ್ದಾನ ಮಾಡಿದ್ದಾಗಿಯೂ ಹೇಳಿದನು". ಇದಾದ ನಂತರ, ಈ ವ್ಯಕ್ತಿ ಮದೀನಾದಲ್ಲಿ

ಕೆಲವು ದಿನಗಳ ಕಾಲ ಉಳಿದುಕೊಂಡ ನಂತರ, ಸ್ವಂತ ಇಚ್ಛೆಯಿಂದ ಇಸ್ಲಾಂ ಧರ್ಮವನ್ನು ಸ್ವೀಕರಿಸಿ ಹಝ್ರತ್ ಪೈಗಂಬರ್(ಸ) ರವರ ವಲಯಕ್ಕೆ ಸೇರಿದರು.

ಅಬೂಸುಫ್ಯಾನಿನ ಈ ಕ್ರೂರವಾದ ಸಂಚಿನ ಕಾರಣದಿಂದ ಮಕ್ಕಾದವರ ಉದ್ದೇಶಗಳ ಬಗ್ಗೆ ಅರಿತಿರುವುದು ಮುಂಚೆಗಿಂತ ಹೆಚ್ಚು ಅಗತ್ಯವಾಯಿತು. ಹೀಗೆ ಹಝ್ರತ್ ಪೈಗಂಬರ್(ಸ) ತನ್ನ ಇಬ್ಬರು ಸಹಾಬಿಯರಾದ ಅಮ್ರ್ ಬಿನ್ ಉಮಯ್ಯ ಝುಮ್‌ರಿ(ರ) ಮತ್ತು ಸಲ್ಮ ಬಿನ್ ಅಸ್ಲಮ್(ರ)ರನ್ನು ಮಕ್ಕದ ಕಡೆಗೆ ಕಳುಹಿಸಿದರು. ಅಬೂಸುಫ್ಯಾನಿನ ಈ ಕೊಲೆಯ ಸಂಚು ಮತ್ತು ಆತನ ಹಿಂದಿನ ಕ್ರೂರ ಕೃತ್ಯಗಳನ್ನು ಮುಂದಿರಿಸಿಕೊಂಡು ಅವಕಾಶ ಸಿಕ್ಕರೆ ಇಸ್ಲಾಮಿನ ಈ ಎದುರಾಳಿಯನ್ನು ಕೊನೆಗೊಳಿಸಲು ಅವರಿಗೆ ಅನುಮತಿ ನೀಡಲಾಯಿತು. ಆದರೆ ಉಮಯ್ಯ ಮತ್ತು ಅವರ ಜೊತೆಗಾರ ಮಕ್ಕಾಗೆ ತಲುಪಿದಾಗ ಖುರೈಶಿಯರು ಜಾಗರೂಕರಾದರು. ಈ ಇಬ್ಬರು ಸಹಾಬಿಯರು ತಮ್ಮ ಜೀವವನ್ನು ರಕ್ಷಿಸಿ ಮದೀನಕ್ಕೆ ಮರಳಿ ಬಂದರು. ಮಾರ್ಗದಲ್ಲಿ ಅವರು ಖುರೈಶಿನ ಇಬ್ಬರು ಗೂಢಚರರನ್ನು ಭೇಟಿಯಾದರು. ಅವರನ್ನು ಖುರೈಶಿನ ಮುಖಂಡರು ಮುಸ್ಲಿಮರ ಚಲನವಲನಗಳನ್ನು ಗೊತ್ತುಮಾಡಲು ಮತ್ತು ಹಝ್ರತ್ ಪೈಗಂಬರ್(ಸ)ರ ಸ್ಥಿತಿಗಳನ್ನು ಅರಿಯಲು ಕಳುಹಿಸಿದ್ದರು. ಇದು ಕೂಡ ಖುರೈಶಿಯರ ಬೇರೊಂದು ಕ್ರೂರ ಸಂಚಿನ ಮುನ್ನುಡಿಯಾಗಿರಲೂ ಬಹುದು. ಆದರೆ ಅಲ್ಲಾಹನ ಅನುಗ್ರಹದಿಂದ ಉಮಯ್ಯ ಮತ್ತು ಸಲ್ಮರಿಗೆ ಖುರೈಶಿಯರ ಗೂಢಚಾರಿಕೆಯ ಬಗ್ಗೆ ಗೊತ್ತಾಯಿತು. ಆದ್ದರಿಂದ ಅವರು ಈ ಗೂಢಚರರ ಮೇಲೆ ಹಲ್ಲೆ ನಡೆಸಿದರು. ಹೀಗೆ ಈ ಜಗಳದಲ್ಲಿ ಒಬ್ಬ ಗೂಢಚರನು ಕೊಲ್ಲಲ್ಪಟ್ಟನು ಮತ್ತು ಇನ್ನೊಬ್ಬನನ್ನು ಬಂಧಿಸಿ ತಮ್ಮ ಜೊತೆಗೆ ಮದೀನಕ್ಕೆ ಮರಳಿ ತರಲಾಯಿತು. (ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂಎ, ಪುಟ-741-743)

ಈ ವಿಷಯ ಮುಂದುವರೆಯುವುದು ಇನ್‌ಶಾಅಲ್ಲಾಹ್

ಪಾಕಿಸ್ತಾನದ ಸ್ಥಿತಿಗತಿಗಳಿಗಾಗಿ ದುಆ ಮಾಡಲು ನಾನು ಹೇಳುತ್ತಿರುತ್ತೇನೆ. ಕೆಲವೊಮ್ಮೆ ವಿರೋಧ ಬಹಳ ಹೆಚ್ಚು ತೀವ್ರಗೊಳ್ಳುತ್ತದೆ. ಆಡಳಿತ ವರ್ಗ ಮತ್ತು ಸರ್ಕಾರ ಕೂಡ ಉಗ್ರವಾದಿ ಮೌಲವಿಯರ ಕೈಗಳಲ್ಲಿ ಆಟಿಕೆಯ ವಸ್ತುಗಳಂತೆ ಆಗಿವೆ. ಮಸೀದಿಯ ಮಿನಾರ ಅಥವಾ ಮಿಹ್‌ರಾಬ್ ಬೀಳಿಸಲಾಗಿದೆ ಎಂದು ಮೊದಲು ವಾರ್ತೆ ಬಂದಿತ್ತು. ಅವರಿಗೆ ಅದರ ಮೇಲೆ ಆಕ್ಷೇಪವಿತ್ತು. ಆದರೆ ನಿನ್ನೆ ಅವರು ರಸ್ತೆ ಮಾಡುವ ನೆಪದಲ್ಲಿ ಇಷ್ಟು ಜಾಗ ನಾವು ಪಡೆಯುವೆವು ಮತ್ತು ಅಲ್ಲಿ ಬುಲ್‌ಡೋಸರ್‌ನಿಂದ ಜಾಗವನ್ನು ಸ್ವಚ್ಛಗೊಳಿಸುವೆವು ಎಂದು ನೋಟಿಸ್ ಕಳುಹಿಸಿದರು. ಆ ಪ್ರದೇಶದಲ್ಲಿ ಮಸೀದಿಯ ಸ್ವಲ್ಪ ಭಾಗವಾದ ಸ್ನಾನಗೃಹ ಇತ್ಯಾದಿಗಳು ಇದ್ದುವು. ಆದರೆ ಬುಲ್‌ಡೋಝರ್‌ನೊಂದಿಗೆ ಬಂದಾಗ ಅವರು ಮೌಲವಿಗಳ ಮಾತಿನ ಅನುಸಾರ ಪೂರ್ತಿ ಮಸೀದಿಯನ್ನು ಉರುಳಿಸಿದರು. ಈ ಮಸೀದಿಯನ್ನು ವಿಭಜನೆಗೆ ಮುಂಚಿತವಾಗಿ ನಿರ್ಮಿಸಲಾಗಿತ್ತು. ಬಹುಶಃ ಹಝ್ರತ್ ಚೌಧರಿ ಝಫರುಲ್ಲಾಹ್ ಖಾನ್ ಸಾಹಿಬ್(ರ) ನಿರ್ಮಿಸಿದ್ದರು. ಅಂತೂ ಇತ್ತೀಚಿಗೆ ವಿರೋಧ ಇಷ್ಟರ ಮಟ್ಟಿಗೆ ವರ್ಧಿಸಿದೆ. ಅಲ್ಲಾಹನೇ ಅವರನ್ನು ಬೇಗನೇ ಹಿಡಿಗೂಡಬಲ್ಲನು. ಅವರ ಕುತಂತ್ರಗಳು ಅವರಿಗೆ ತಿರುಗೇಟಾಗಲಿ.

ಆದ್ದರಿಂದ ಅಹ್ಮದಿಯರು ವಿಶೇಷವಾಗಿ ಪಾಕಿಸ್ತಾನದ ಅಹ್ಮದಿಯರು ಬಹಳ ಹೆಚ್ಚು ದುಆ ಮಾಡಬೇಕಾದ ಅಗತ್ಯವಿದೆ. ಇದರ ಬಗ್ಗೆ ಗಮನವಹಿಸಿರಿ. ಅದೇ ರೀತಿಯಲ್ಲಿ ಫೆಲಸ್ತೀನಿನ ಕುರಿತು ಒಪ್ಪಂದ ನಡೆದಿದೆ ಎಂದು ಕೆಲವರು ಹೇಳುತ್ತಾರೆ. ಒಪ್ಪಂದ ಆಗಿಲ್ಲವೆಂದು ಕೆಲವೊಮ್ಮೆ ಹೇಳುತ್ತಾರೆ. ಒಪ್ಪಂದದ ನಂತರವೂ ಘಟನೆಗಳು ನಡೆಯುತ್ತಿವೆ. ಈ ಒಪ್ಪಂದ ಕಾರಣದಿಂದ ಕೆಲವರು ಅನಾವಶ್ಯಕವಾಗಿ ಸಂತೋಷವನ್ನು ಪ್ರಕಟಿಸಲು ತೊಡಗಿರುವರು. ಆದರೆ ದಜ್ಜಾಲಿ ಶಕ್ತಿಗಳ ಬಗ್ಗೆ ಯಾವುದೇ ಭರವಸೆಯಿಲ್ಲ ಎಂದು ಸಂತೋಷಪಡುವವರು ತಿಳಿಯಬೇಕಾಗಿದೆ. ಅವರು ಹೇಳುವುದು ಒಂದು, ಮಾಡುವುದು ಬೇರೊಂದು ಆಗಿದೆ. ಆದ್ದರಿಂದ ಇಷ್ಟು ಅಧಿಕ ಸಂತೋಷ ಭಾವನೆಯ ಅಗತ್ಯವಿಲ್ಲ. ಫೆಲಸ್ತೀನಿಯರಿಗಾಗಿ ದುಆ ಮಾಡಬೇಕಾದ ಅಗತ್ಯವಿದೆ. ಮುಸ್ಲಿಮರು ಬುದ್ಧಿ ಉಪಯೋಗಿಸಿ ತಮ್ಮ ಹಕ್ಕನ್ನು ಗಳಿಸಲು ಪ್ರಯತ್ನಿಸಬೇಕಾಗಿದೆ. ಅಲ್ಲಾಹನು ಮುಸ್ಲಿಂ ಸಮುದಾಯಕ್ಕೂ ಬುದ್ಧಿ ನೀಡಲಿ – ಆಮೀನ್.

ಈಗ ನಾನು ಕೆಲವು ಮೃತರ ಬಗ್ಗೆ ಉಲ್ಲೇಖಿಸುತ್ತೇನೆ ಮತ್ತು ನಂತರ ಅವರ ನಮಾಝೆ ಜನಾಝ ಗ್ಹಾಯಿಬ್ ನಿರ್ವಹಿಸಲಾಗುವುದು. ಮೊದಲ ಉಲ್ಲೇಖವು ರಬ್ವಾದಲ್ಲಿನ ಸದರ್ ಅಂಜುಮನ್ ಅಹ್ಮದಿಯಾದ ನಝಿರ್ ದೀವಾನ್ ಆಗಿದ್ದ ಗೌರವಾನ್ವಿತ ಶೇಖ್ ಮುಬಾರಕ್ ಅಹ್ಮದ್ ಸಾಹಿಬ್ ಅವರದ್ದಾಗಿದೆ. ಅವರು ಜನವರಿ 11 ರಂದು ತಮ್ಮ ಎಪ್ಪತ್ತೇಳನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್–** ಮೃತರು ಮೂಸಿಯಾಗಿದ್ದರು ಮತ್ತು ಹುಟ್ಟಿನಿಂದ ಅಹ್ಮದಿ ಸಮುದಾಯಕ್ಕೆ ಸೇರಿದವರಾಗಿದ್ದು, ಅವರ ಅಜ್ಜ ಶೇಖ್ ಮುಹಮ್ಮದ್ ದೀನ್ ಸಾಹಿಬ್ 1938 ರಲ್ಲಿ ಬೈಅತ್ ಮಾಡಿದ್ದರು. ಅವರು ಗುರುದಾಸ್ಪುರದ ಬಟಾಲಾ ಜಿಲ್ಲೆಯ ಕಥಾ ನಂಗಲ್ ತಹಸಿಲ್‌ಗೆ ಸೇರಿದವರು.

ಬಿಎ, ಬಿ.ಎಡ್. ಶಿಕ್ಷಣ ಮುಗಿಸಿದ ನಂತರ, ಶೇಖ್ ಮುಬಾರಕ್ ಸಾಹಿಬ್ 1966 ರಿಂದ 1981 ರವರೆಗೆ ಸುಮಾರು ಹದಿನೈದು ವರ್ಷಗಳ ಕಾಲ ತಾಲೀಮುಲ್ ಇಸ್ಲಾಂ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ನಂತರ, 1973 ರಲ್ಲಿ ಶಾಲೆಗಳನ್ನು ರಾಷ್ಟ್ರೀಕರಣಗೊಳಿಸಿದಾಗ, ಅವರು ಇತರ ಕೆಲವು ಶಾಲೆಗಳಲ್ಲಿಯೂ ಸರ್ಕಾರಿ ಸೇವೆ ಸಲ್ಲಿಸಿದರು. ಅವರು ಬೋಧನಾ ಕರ್ತವ್ಯಗಳನ್ನು ನಿರ್ವಹಿಸಿದ್ದಾರೆ ಮತ್ತು ನಲವತ್ತು ವರ್ಷಗಳ ಕಾಲ ಜಮಾಅತ್ತಿಗೆ ಸೇವೆ ಸಲ್ಲಿಸಿದ್ದಾರೆ. ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಅವರಲ್ಲಿ ತಮ್ಮ ವಖ್ಫ್ ಅನ್ನು ಪ್ರದಾನ ಮಾಡಿದರು. 1982 ರಲ್ಲಿ, ಅವರ ವಖ್ಫ್ ಅನ್ನು ಸ್ವೀಕರಿಸಲಾಯಿತು. ಮತ್ತು ನಂತರ 1982 ರಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರನ್ನು ಶತಮಾನೋತ್ಸವದ ಮಹೋತ್ಸವದ ಸಮಯದಲ್ಲಿ ಉಪ ವಕೀಲರನ್ನಾಗಿ ನೇಮಿಸಿದರು. ನಂತರ ಅವರಿಗೆ ನಾಯಿಬ್ ವಕೀಲುಲ್ ಮಾಲ್ ಆಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ಎಡೀಷನಲ್ ನಾಝಿರ್ ಬೈತುಲ್ ಮಾಲ್ ಸದರ್ ಅಂಜುಮನ್ ಅಹ್ಮದಿಯಾ ಆಗಿ ಸೇವೆ ಸಲ್ಲಿಸಲು ಸೌಭಾಗ್ಯಪಡೆದರು. ನಂತರ ಅವರು ನಝಿರ್ ಬೈತುಲ್ ಮಾಲ್ ಆಮದ್ ಆಗಿಯೂ ಕೆಲಸ ಮಾಡಿದರು. ನಂತರ, ತದನಂತರ, ಅವರು ನಾಝಿರ್ ದೀವಾನ್‌ರಾಗಿ, ಮತ್ತು ನಾಝಿರ್ ರಿಶ್ತಾ ನಾತಾರಾಗಿ ದೀರ್ಘಕಾಲ ಜಮಾಅತ್‌ಗೆ ಸೇವೆ ಸಲ್ಲಿಸುವ ಅವಕಾಶವನ್ನು ಪಡೆದರು ಮತ್ತು ಅದೇ ರೀತಿ, ಅವರು ಅಂಗಸಂಸ್ಥೆಗಳಾದ ಅನ್ಸಾರುಲ್ಲಾ ಮತ್ತು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ಮೇಲ್ವಿಚಾರಕರಾಗಿ ವಿವಿಧ ಹುದ್ದೆಗಳನ್ನು ಅಲಂಕರಿಸಿದರು.

ಹಸ್ಸಾನ್ ಮಹಮೂದ್ ಸಾಹಿಬ್ ಅವರ ಸೋದರಳಿಯ ಮತ್ತು ಅಳಿಯ ಆಗಿದ್ದಾರೆ, ಮತ್ತು ಅವರು ಮುರಬ್ಬಿಯಾಗಿದ್ದಾರೆ. ಅವರು ಹೇಳುತ್ತಾರೆ: ಖಲೀಫತ್ ಜೊತೆ ಪ್ರಾಮಾಣಿಕ ಮತ್ತು ನಿಷ್ಠಾವಂತ ಸಂಬಂಧವನ್ನು ಕಾಪಾಡಿಕೊಳ್ಳಲು ಮತ್ತು ಹಣಕಾಸಿನ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬೇಡಿ ಎಂದು ಅವರು ಯಾವಾಗಲೂ ಹೇಳುತ್ತಿದ್ದರು. ಅವರು ಮುರಬ್ಬಿಯರಿಗೆ ಈ ರೀತಿ ಸಲಹೆ ನೀಡುತ್ತಿದ್ದರು. ಅವರು ನಮಾಝ್‌ಗಾಗಿ ವಿಶೇಷ ವ್ಯವಸ್ಥೆಗಳನ್ನು ಮಾಡುತ್ತಿದ್ದರು ಎಂದು ಹೇಳುತ್ತಾರೆ. ತಮ್ಮ ಕೊನೆಯ ದಿನಗಳವರೆಗೂ, ಅವರು ಮಸೀದಿಯಲ್ಲಿ ತಮ್ಮ ಪ್ರಾರ್ಥನೆಗಳನ್ನು ನಿರ್ವಹಿಸಲು ಪ್ರಯತ್ನಿಸಿದರು ಮತ್ತು ಸಾರ್ವಜನಿಕ ಮತ್ತು ಖಾಸಗಿ ಸಭೆಗಳಲ್ಲಿ ಖಲೀಫತ್‌ನೊಂದಿಗಿನ ತಮ್ಮ ಸಂಬಂಧವನ್ನು ದೃಢವಾಗಿರಿಸಲು ಯಾವಾಗಲೂ ಒತ್ತಿ ಹೇಳುತ್ತಿದ್ದರು. ದೇವರು ತಮ್ಮ ಮಕ್ಕಳನ್ನು ಖಲೀಫತ್‌ನೊಂದಿಗೆ ಸಂಪರ್ಕದಲ್ಲಿರಿಸಲಿ ಎಂದು ಅವರು ಯಾವಾಗಲೂ ಪ್ರಾರ್ಥಿಸುತ್ತಿದ್ದರು ಮತ್ತು ನಂತರ ಎಲ್ಲವನ್ನೂ ಖಲೀಫತುಲ್ ಮಸೀಹ್‌ಗೆ ಬರೆಯುವುದಾಗಿ ಹೇಳುತ್ತಿದ್ದರು. ನಾನು ಅದನ್ನು ಮರೆಮಾಡುವುದಿಲ್ಲ, ಮತ್ತು ನಾನು ತಪ್ಪು ಮಾಡಿದರೂ ಸಹ, ಅದನ್ನು ಸರಿಪಡಿಸಲು ಮತ್ತು ನನಗೆ ಪ್ರಯೋಜನವಾಗುವಂತೆ ನಾನು ಅದನ್ನು ಬರೆಯುತ್ತೇನೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಅವರು ತಮ್ಮ ವಖ್ಫ್ ಅನ್ನು ಬಹಳ ಉತ್ತಮವಗಿ ನಿರ್ವಹಿಸಿದ್ದಾರೆ. ನಾನು ಸಹ ಅದನ್ನು ನೋಡಿದ್ದೇನೆ, ನಾನು ಅಂಜುಮನ್‌ನಲ್ಲಿದ್ದಾಗ, ಅವರು ನನ್ನೊಂದಿಗೆ ಕೆಲಸ ಮಾಡಿದರು. ಅವರು ಪ್ರಪಂಚಕ್ಕಿಂತ ಧರ್ಮಕ್ಕೆ ಯಾವಾಗಲೂ ಆದ್ಯತೆ ನೀಡುವುದಕ್ಕೆ ಉದಾಹರಣೆಯಾಗಿದ್ದರು. ಸರಳವಾಗಿ ಬದುಕುವುದು ಎಂದರೆ ಸರಳ ಜೀವನ ನಡೆಸುವುದು ಮತ್ತು ನಿಮ್ಮ ಸಮಯವನ್ನು ಪೂರ್ಣವಾಗಿ ನೀಡುವುದು. ಸಾಮಾನ್ಯವಾಗಿ ಅವರ ರೂಢಿ ಏನಾಗಿತ್ತು ಎಂದರೆ ಅವರು ಪ್ರವಾಸ ಕೈಗೊಂಡರೆ ಪ್ರವಾಸದಿಂದ ಹಿಂದಿರುಗಿದ ನಂತರ ಅವರು ಮೊದಲು ಕಚ್ಚೇರಿಗೆ ಭೇಟಿ ನೀಡಿ ಪುನಃ ಸಂಜೆ ಪ್ರವಾಸ ಕೈಗೊಳ್ಳುತ್ತಿದ್ದರು. ಅವರ ಮಕ್ಕಳಲ್ಲಿ ಯಾರಾದರೂ ವಿಶ್ರಾಂತಿ ಪಡೆಯಲು ಸೂಚಿಸಿದರೆ. ಅವರು ಅನಾರೋಗ್ಯಕ್ಕೆ ಒಳಗಾಗಿದ್ದರೂ, ನನ್ನ ನಿವೃತ್ತಿ ನನ್ನ ಮರಣದ ನಂತರವೇ ಆಗುತ್ತದೆ ಎಂದು ಹೇಳುತ್ತಿದ್ದರು. ಕಚೇರಿ ಸಿಬ್ಬಂದಿ ಕೂಡ ಅವರ ಬಗ್ಗೆ ತುಂಬಾ ಸಂತೋಷಪಟ್ಟರು. ಅವರು ಯಾವಾಗಲೂ ನಮ್ಮನ್ನು ನೋಡಿಕೊಳ್ಳುತ್ತಾರೆ, ನಮ್ಮ ವೈಯಕ್ತಿಕ ಅಗತ್ಯಗಳನ್ನು ಸಹ ನೋಡಿಕೊಳ್ಳುತ್ತಾರೆ ಎಂದು ಅವರು ಹೇಳುತ್ತಾರೆ. ಅವರು ಎಲ್ಲವನ್ನೂ ಪರಿಶೀಲಿಸುತ್ತಿದ್ದರು ಮತ್ತು ಅದನ್ನು ಪೂರೈಸಲು ಪ್ರಯತ್ನಿಸುತ್ತಿದ್ದರು. ಅದೇ ರೀತಿ, ಅವರು ಓದುವುದರಲ್ಲಿ ಅಪಾರ ಉತ್ಸಾಹ ಹೊಂದಿದ್ದರು ಮತ್ತು ಅವರು ಯಾವಾಗಲೂ ಮನೆಯಲ್ಲಿಯೇ ಅಧ್ಯಯನ ಮಾಡುವುದನ್ನು ನೋಡಿದ್ದರು

ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪುಸ್ತಕಗಳು ಮತ್ತು ಬರಹಗಳನ್ನು ಆಳವಾಗಿ ಅಧ್ಯಯನ ಮಾಡಿದ್ದರು ಮತ್ತು ಅವರು ತಮ್ಮ ಮಕ್ಕಳಿಗೆ ಅದನ್ನೇ ಒತ್ತಿ ಹೇಳುತ್ತಿದ್ದರು ಎಂದು ಬರೆದಿದ್ದಾರೆ. ಅವರಿಗೆ ಜಮಾಅತ್ತಿನ ನಿಯಮಗಳು ಮತ್ತು ನಿಬಂಧನೆಗಳ ಬಗ್ಗೆ ಅಪಾರ ಜ್ಞಾನವಿತ್ತು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವೂ ಇತ್ತು. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಸಾಮರ್ಥ್ಯಗಳನ್ನು ನೀಡಿ ಅನುಗ್ರಹಿಸಿದ್ದನು. ಜಮಅತ್ತಿನ ನಿಯಮಗಳನ್ನು ಪರಿಷ್ಕರಿಸಿದಾಗ, ಅವರು ಸಮಿತಿಯಲ್ಲೂ ಇದ್ದರು ಮತ್ತು ಬಹಳ ಉತ್ತಮ ಅಭಿಪ್ರಾಯಗಳನ್ನು ನೀಡುತ್ತಿದ್ದರು.

ಕರಾಚಿಯ ಬೈತುಲ್ ಮಾಲ್‌ನ ಇನ್ಸ್‌ಪೆಕ್ಟರ್ ಸೈಯದ್ ದಾವೂದ್ ಅಹ್ಮದ್ ಹೇಳುತ್ತಾರೆ: ಅವರು ಶೇಖ್ ಸಾಹಿಬ್ ಅವರ ಮೇಲ್ವಿಚಾರಣೆಯಲ್ಲಿ ಇಪ್ಪತ್ತಮೂರು ವರ್ಷಗಳ ಕಾಲ ಬೈತುಲ್ ಮಾಲ್ ಆಮದ್‌ನಲ್ಲಿ ಕೆಲಸ ಮಾಡಿದರು. ಅವರು ನಮ್ಮನ್ನು ತುಂಬಾ ಪ್ರೀತಿಯಿಂದ ನಡೆಸಿಕೊಳ್ಳುತ್ತಿದ್ದರು. ಎಲ್ಲಿ ತಪ್ಪು ಆಗಿದೆ ಎಂದು ಅವರು ವಿವರಿಸುತ್ತಿದ್ದರು. ಒಳ್ಳೆಯ ಕೆಲಸ ಮಾಡಿದವರನ್ನು ಅವರು ಪ್ರೋತ್ಸಾಹಿಸುತ್ತಿದ್ದರು. ಶೇಖ್ ಸಾಹಿಬ್ ನನ್ನೊಂದಿಗೆ ವಿಶೇಷ ಸಂಬಂಧ ಹೊಂದಿದ್ದಾರೆಂದು ಕಚೇರಿಯ ಪ್ರತಿಯೊಬ್ಬ ಉದ್ಯೋಗಿಯೂ ಭಾವಿಸುತ್ತಿದ್ದರು. ನಾವು ಪ್ರತಿಯೊಬ್ಬ ಕಾರ್ಯಕರ್ತರ ಮನೆ ಮತ್ತು ಕ್ಷೇತ್ರದ ಸಮಸ್ಯೆಗಳನ್ನು ಗಮನಿಸುತ್ತೇವೆ ಮತ್ತು ಸಾಧ್ಯವಾದಷ್ಟು ಸಹಕರಿಸುತ್ತೇವೆ. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ. ಅವರಿಗೆ ಆರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗನಿದ್ದಾನೆ. ಮತ್ತು ಒಬ್ಬಳು ಧರ್ಮಪತ್ನಿ ಇದ್ದಾರೆ.

ಎರಡನೆಯ ಉಲ್ಲೇಖವು ಇತ್ತೀಚೆಗೆ ಎಪ್ಪತ್ತಾರು ವಯಸ್ಸಿನಲ್ಲಿ ನಿಧನರಾದ ಗೌರವಾನ್ವಿತ ಮುಹಮ್ಮದ್ ಮುನೀರ್ ಅದಲ್ಬಿ ಸಾಹಿಬ್ ಅವರದ್ದಾಗಿದೆ. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**– ಅವರಿಗೆ ಮೂವರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳಿದ್ದು, ಅವರೆಲ್ಲರೂ ಖತರ್‌ನಲ್ಲಿ ವಾಸಿಸುತ್ತಿದ್ದಾರೆ.

